# ಉತ್ತರ ಕನ್ನಡ ಪ್ರವಾಸ

## ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ಪ್ರಸಾರಾಂಗದ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳಲ್ಲಿ ಈ ಉಪನ್ಯಾಸ ಗ್ರಂಥಮಾಲೆ ಅತ್ಯಂತ ಮುಖ್ಯವೂ, ಜನಪ್ರಿಯವೂ ಆಗಿರುವದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯ ಆಡಳಿತ ಕ್ಷೇತ್ರದಲ್ಲಿರುವ ಏಳು ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು ಶಾಸ್ತ್ರಸಮ್ಮತವಾದ ಸರಣಿಯಲ್ಲಿ ಜನಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನ ಭಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಮನೆ ಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ ಪ್ರೋತ್ಸಾಹವೂ ದೊರೆಯುತ್ತಿದೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪನ್ಯಾಸಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವುದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನಪ್ರಸಾರದ ಕಾರ್ಯದಲ್ಲಿ ಭಾಗವಹಿಸುವುದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಅಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವದಲ್ಲದೆ ಎಂತಹ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೪೬೬ ಪುಸ್ತಿಕೆಗಳು ಪ್ರಕಟವಾಗಿವೆ. ಅವು ಅಚ್ಚಾಗಿ ಹೊರ ಓದುತ್ತಾರೆ. ಅನೇಕ ಪುಸ್ತಿಕೆಗಳು ನಾಲ್ಕುಐದು ಮುದ್ರಣಗಳನ್ನು ಕಂಡಿರುವದು ಈ ಮಾಲೆಯ ಉಪಯುಕ್ತತೆಯನ್ನೂ, ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ಸರ್ವತೋಮುಖ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

**ಡಾ. ಎ.ಎಮ್. ಪಠಾನ**
ಕುಲಪತಿಗಳು
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

# ಅರಿಕೆ

ಕರ್ನಾಟಕ ವಿಶ್ವವಿದ್ಯಾಲಯವು ಸಲ್ಲಿಸುತ್ತಿರುವ ಸಾಮಾಜಿಕ ಸಾಂಸ್ಕೃತಿಕ ಸೇವೆಗಳ ವಿವಿಧ ಅಂಗಗಳಲ್ಲಿ ಪ್ರಸಾರಾಂಗವು ಪ್ರಮುಖವಾಗಿದೆ. ಹಳ್ಳಿಹಳ್ಳಿಗಳಲ್ಲಿ ಜನಸಾಮಾನ್ಯರಿಗಾಗಿ ವೈಜ್ಞಾನಿಕ, ಸಾಹಿತ್ಯಿಕ, ಸಾಮಾಜಿಕ ವಿಷಯಗಳ ಕುರಿತು ಉಪನ್ಯಾಸಗಳನ್ನು ಶಾಸ್ತ್ರಸಮ್ಮತವಾದ ಸರಣಿಯಲ್ಲಿ ಏರ್ಪಡಿಸಿ ನಂತರ ಆ ಉಪನ್ಯಾಸಗಳನ್ನು ಗ್ರಂಥರೂಪದಲ್ಲಿ ಪ್ರಕಟಿಸಿ ಸುಲಭ ಬೆಲೆಯಲ್ಲಿ ಕನ್ನಡಿಗರ ಮನೆಬಾಗಿಲಿಗೆ ತಲುಪಿಸುವ ಮಹಾಕಾರ್ಯವನ್ನು ಪ್ರಸಾರಾಂಗವು ಯಶಸ್ವಿಯಾಗಿ ನೆರವೇರಿಸುತ್ತಿರುವದು ಹೆಮ್ಮೆಯ ಹಾಗು ಸಂತೋಷದ ಸಂಗತಿಯಾಗಿದೆ. ಶ್ರೀಸಾಮಾನ್ಯನ ಬೌದ್ಧಿಕ ಮಟ್ಟವನ್ನು ಎತ್ತರಿಸುವಲ್ಲಿ ಈ ಯೋಜನೆ ಜಯವನ್ನು ಸಾಧಿಸಿದೆ. ಬುಧಜನರ ಮೆಚ್ಚುಗೆಗೆ ಪಾತ್ರವಾಗಿದೆ.

ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗ ಯೋಜನೆಯ ೪೧೩ನೇ ಉಪನ್ಯಾಸ ಶಿಬಿರವು ಉತ್ತರ ಕನ್ನಡ ಜಿಲ್ಲೆಯ ಅಂಕೋಲೆ ತಾಲೂಕಿನ ಅವರ್ಸೆ ಗ್ರಾಮದಲ್ಲಿ ದಿನಾಂಕ ೧೫ ಹಾಗು ೧೬ ಡಿಸೆಂಬರ ೧೯೯೫ ಜರುಗಿದಾಗ ಉತ್ತರ ಕನ್ನಡದ ಪ್ರೇಕ್ಷಣೀಯ ಸ್ಥಳಗಳು ಎಂಬ ವಿಷಯದ ಮೇಲೆ ನಾನು ಮಾಡಿದ ಉಪನ್ಯಾಸದ ಫಲಶ್ರುತಿ ಈ ಕಿರುಹೊತ್ತಿಗೆಯಾಗಿದೆ.

ಕರಾವಳಿ, ಮಲೆನಾಡು, ಬೈಲುಸೀಮೆ ಈ ಮೂರೂ ಪ್ರಾಕೃತಿಕ ವಿನ್ಯಾಸಗಳನ್ನು ಒಂದೇ ಜಿಲ್ಲೆಯಲ್ಲಿ ಮೇಳೈಸಿಕೊಂಡ ವಿಶಿಷ್ಟ ಜಿಲ್ಲೆಯಾದ ಉತ್ತರ ಕನ್ನಡವನ್ನು ಹತ್ತಿರದಿಂದ ಕಂಡ ಕವಿಗಳು, ಪ್ರವಾಸಿಗರು ಇಲ್ಲಿಯ ನಿಸರ್ಗದ ನೋಟಕ್ಕೆ, ಕಲೆಯ ಕುಸುರಿಗೆ, ಧಾರ್ಮಿಕ ನೆಲೆಗಳ ಹಿರಿಮೆ ಗರಿಮೆಗಳಿಗೆ ಮನಸೋತು ಹಾಡಿ ಹೊಗಳಿದ್ದಾರೆ. ನನ್ನ ಪಾಲಿಗಂತು ಈ ಜಿಲ್ಲೆ ನಂದನವನ. ಅಂತೆಯೇ ನಾನು ಹಿಂದೊಮ್ಮೆ ಕವನಿಸಿದ್ದುಂಟು.

ಪ್ರಿಯತಮೆಯರಿಬ್ಬರು ಬಳಿಯಿದ್ದು ನನ್ನ
ಮನತಣಿಸಿ ಬೆಳಗಿದರು ಬಾಳನ್ನು ಚೆನ್ನ
ಒಬ್ಬಳೆಂದರೆ ನನ್ನ ಕೈಹಿಡಿದ ನಲ್ಲೆ
ಇನ್ನೊಬ್ಬ ಸುಂದರಿಯು ನನ್ನಿನಿಯ ಜಿಲ್ಲೆ.

ಇಂತಿರುವಾಗ ನನ್ನಿನಿಯ ಜಿಲ್ಲೆಯ ಪ್ರೇಕ್ಷಣೀಯ ಸ್ಥಳಗಳ ಕುರಿತು ಉಪನ್ಯಾಸ ಮಾಡಲು ಪ್ರಸಾರಾಂಗದವರು ಹೇಳಿದಾಗ ಆನಂದವಾಯಿತು. ಉತ್ತರ ಕನ್ನಡದ ಉದ್ದಗಲಕ್ಕೂ ದೃಷ್ಟಿ ಹಾಯಿಸಿದಾಗ ಕಾಣುವ ಪ್ರೇಕ್ಷಣೀಯ ಸ್ಥಳಗಳು ನೂರಾರು, ಪಟ್ಟಿಮಾಡಲು ತೊಡಗಿದಾಗ ಎರಡುನೂರಕ್ಕೂ ಹೆಚ್ಚು ನೆಲೆಗಳು ಲಭಿಸಿದವು! ಪರದೇಶದಲ್ಲಿ ಒಂದು ಕೊಳ, ಒಂದು ದಂಡೆ, ಒಂದು ಕೋಟೆ ಇದ್ದರೆ ಅದಕ್ಕೆ ಪ್ರಚಾರ ನೀಡಿ ಪ್ರವಾಸಿಗರನ್ನು ಆಕರ್ಷಿಸುವರು. ಆದರೆ ನಮ್ಮಲ್ಲಿ ನೋಡತಕ್ಕ ನೆಲೆಗಳು ಎಷ್ಟಿಲ್ಲ? ಲೆಕ್ಕವೇ ಇಲ್ಲ! ಲೆಕ್ಕಿಸುವವರೂ ಇಲ್ಲ!

ಉತ್ತರ ಕನ್ನಡದ ಹಲವಾರು ಪ್ರೇಕ್ಷಣೀಯ ಸ್ಥಳಗಳಲ್ಲಿ ಪ್ರಮುಖವಾದ ಕೆಲವನ್ನು ಆಯ್ದು ಈ ಕಿರುಹೊತ್ತಿಗೆಯಲ್ಲಿ ಪರಿಚಯಿಸಲಾಗಿದೆ. ಈ ಸ್ಥಳಗಳನ್ನು ಜನ ನೋಡಿ ಆನಂದಿಸಲೆಂಬುದೇ ಈ ಬರಹದ ಆಶಯ. ಈ ಪುಸ್ತಕವನ್ನು ಪ್ರಕಟಿಸಿ ಪ್ರೋತ್ಸಾಹಿಸಿದ ಪ್ರಸಾರಾಂಗದ ನಿರ್ದೇಶಕರಾದ ಪ್ರೊ. ಎಚ್.ವಿ. ನಾಗೇಶ ಹಾಗೂ ಸಹಾಯಕ ನಿರ್ದೇಶಕರಾದ ಡಾ. ಹರಿಲಾಲ ಪವಾರ ಅವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

**ಗೋಪಾಲಕೃಷ್ಣ ಪಿ. ನಾಯಕ**

# ೧. ಪ್ರವೇಶ

ಮಾನವ ಜೀವನದಲ್ಲಿ ಪ್ರವಾಸವು ಮಹತ್ವದ ಮತ್ತು ಮನೋಹರವಾದ ಅಂಶ. ಪ್ರತಿಯೊಬ್ಬನ ಪಾಲಿಗೂ ಪ್ರವಾಸ ಮಾಡುವ ಯೋಗ ಒಂದಿಲ್ಲೊಂದು ಕಾರಣದಿಂದಾಗಿ ಬಂದೇ ಬರುವದು. ಹತ್ತಿರವೆ ಇರಲಿ ದೂರವೆ ಇರಲಿ ಹೊಸ ಸ್ಥಳಕ್ಕೆ ಹೋದಾಗ ಅಲ್ಲಿ ನೋಡತಕ್ಕ ಆಕರ್ಷಕ ಸ್ಥಳಗಳಿದ್ದಲ್ಲಿ ವಸ್ತು ವಿಶೇಷಗಳಿದ್ದಲ್ಲಿ ಅವುಗಳನ್ನು ಕಾಣುವ ಇಚ್ಛೆ ಪ್ರತಿಯೊಬ್ಬನ ಮನದಲ್ಲಿ ಮೂಡುವದು ಸಹಜ. ಹೊಸ ಹೊಸ ಸ್ಥಳಗಳ ಪ್ರಕೃತಿ ಸೌಂದರ್ಯವನ್ನು, ಪವಿತ್ರ ನೆಲೆಗಳನ್ನು, ಪ್ರಸಿದ್ಧ ಉದ್ದಿಮೆಗಳನ್ನು, ವೈಜ್ಞಾನಿಕ ವೈಚಿತ್ರ್ಯ ಗಳನ್ನು, ಕಲಾಸಾಧನೆಗಳನ್ನು ಕಾಣಬೇಕೆಂಬ ಕಾತರವು, ನಾನಾ ರೀತಿಯ ಸಂಸ್ಕೃತಿ-ಸಂಸ್ಕಾರ-ಆಚಾರ ವಿಚಾರಗಳನ್ನು ಪ್ರತ್ಯಕ್ಷವಾಗಿ ಪರಿಚಯಿಸಿಕೊಳ್ಳಬೇಕೆಂಬ ಬಯಕೆಯು, ಹೊಂದುವ ಉತ್ಸಾಹವು ಜನರಲ್ಲಿ ಸಾಮಾನ್ಯವಾಗಿ ಇದ್ದೇ ಇರುತ್ತದೆ. ಪ್ರೇಕ್ಷಣೀಯ ಸ್ಥಳಗಳನ್ನು ನೋಡಲೆಂದೇ ಪ್ರವಾಸ ಕೈಕೊಳ್ಳುವವರು ಅನೇಕರು. ದಿನಕಳೆದಂತೆ ಇಂಥವರ ಸಂಖ್ಯೆ ಹೆಚ್ಚಾಗುತ್ತಲಿದೆ. ಇನ್ನು ವೃತ್ತಿಯ ಕಾರ್ಯಕಲಾಪಗಳಿಗಾಗಿ, ವ್ಯಾಪಾರ-ವ್ಯವಹಾರಗಳಿಗಾಗಿ ಇನ್ನಿತರ ಕಾರಣಗಳಿಗಾಗಿ ಒಂದು ಸ್ಥಳಕ್ಕೆ ಹೋದಾಗ ಅಲ್ಲಿ ಸರಿಯಾದ ಅನುಕೂಲತೆಗಳಿದ್ದರೆ ಅಲ್ಲಿ ಸಾಧ್ಯವಾದಷ್ಟು ಹೆಚ್ಚು ಕಾಲ ನಿಂತು ಅಲ್ಲಿಯ ನೋಡತಕ್ಕ ನೆಲೆಗಳನ್ನು ನೋಡಿ ನಲಿಯ ಬಯಸುವದು ಜನರ ಸಹಜ ಸ್ವಭಾವವಾಗಿದೆ.

ಪ್ರೇಕ್ಷಣೀಯ ಸ್ಥಳಗಳ ದೃಷ್ಟಿಯಿಂದ ನೋಡಿದಾಗ ಉತ್ತರಕನ್ನಡ ಜಿಲ್ಲೆ ಪ್ರವಾಸಿಗಳಿಗೆ ನಂದನವನವಾಗಿದೆ. ಇಲ್ಲಿ ಎತ್ತದೃಷ್ಟಿಹಾಯಿಸಿದರೂ ಕಾಣುವ ದೃಶ್ಯ ಪ್ರೇಕ್ಷಣೀಯವೆ! ಗುಂಡಬಳೆಯ ಒಂದು ಶಿಲಾಶಾಸನವು ಈ ನೆಲವನ್ನು "ಕೊಂಕಣ ಶ್ರೀಮುಖ ದರ್ಪಣಂ" ಎಂದು ನಿರೂಪಿಸಿದೆ ಶ್ರೀ ರಂಗನಾಥ ದಿವಾಕರರು ಉತ್ತರ ಕನ್ನಡವನ್ನು "ಸಿಂಡೆರೆಲ್ಲಾ ಜಿಲ್ಲೆ" ಎಂದಿದ್ದಾರೆ. "ಕೊಂಕಣ ಧಾತ್ರಿಯ ಕಂಕಣದಂತೆಸುವ" ಸೀಮೆ ಇದೆಂದು ಇನ್ನೊಂದೆಡೆಯಲ್ಲಿ ಬಣ್ಣಿಸಲಾಗಿದೆ.

ಕವಿತಾಗುಣಾರ್ಣವ, ಆದಿಕವಿ ಪಂಪ ಸಾವಿರಕ್ಕೂ ಹೆಚ್ಚುವರುಷ ಪೂರ್ವದಲ್ಲಿಯೇ (ಕ್ರಿ.ಶ. ೯೫೦) ಆಗಿನ ಬನವಾಸಿ ದೇಶವನ್ನು ಅಂದರೆ ಇಂದಿನ ಉತ್ತರ ಕನ್ನಡ ಜಿಲ್ಲೆಯನ್ನು ಮೆಚ್ಚಿ ಪ್ರಶಸ್ತಿಪತ್ರವೆಂಬಂತೆ ಈ ಕೆಳಗಿನ ಕವಿತೆಗಳನ್ನು ಬರೆದದ್ದು ಇದೆ.

"ಚಾಗದ ಭೋಗದ ಗೇಯದ ಗೊಟ್ಟಿಯಲಂಪಿನಿಂಪುಗ
ಳ್ಗಾಗರಮಾದ ಮಾನಿಸರೆ ಮಾನಿಸರಂತವರಾಗಿ ಪುಟ್ಟಲೇ
ನಾಗಿಯುಮೇನೊ ತೀರ್ದಪುದೆ ತೀರದೊಡಂ ಮರಿದುಂಬಿಯಾಗಿ ಮೇಣ್
ಕೋಗಿಲೆಯಾಗಿ ಪುಟ್ಟುವದು ನಂದನವನದೊಳ್ ಬನವಾಸಿದೇಶದೊಳ್||

ತೆಂಕಣಗಾಳಿ ಸೋಂಕಿದೊಡಮೊಳ್ನುಡಿಗೇಳ್ದೊಡಮಿಂಪನಾಳ್ದಗೇ
ಯಂಕಿವಿವೊಕ್ಕೊಡಂ ಬಿರಿದ ಮಲ್ಲಿಗೆಗಂಡೊಡಮಾದ ಕೆಂದಲಂ
ಪಂಕೆಡೆಗೊಂಡೊಡಂ ಮಧುಮಹೋತ್ಸವಮಾದೊಡಮೇನನೆಂಬೆನಾ
ರಂಕುಸವಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿದೇಶಮಂ||"

ಪಂಪನಂತೆಯೇ ಉತ್ತರ ಕನ್ನಡದಲ್ಲಿಯೆ ನೆಲೆಸಿದ ಇನ್ನೊರ್ವ ಅಚ್ಚಗನ್ನಡ ಮೇರು ಕವಿ ಆಂಡಯ್ಯ

"ಪನವುಂ ನಾಲಿಗೆಯುಳ್ಳವಂ ಬಣ್ಣಿಸಲ್ಕಾರನಾ
ನೆಲಮಂ ಮತ್ತಿನ ಮಾನಿಸರ್ ಪೊಗಳೇನಂ ಬಲ್ಲರ್ ಎಂಬ

ಬಲ್ಲುಲಿಯ ನೆಟ್ಟನೆ ತಾಳ್ದು ಕನ್ನಡವೆನಿಪ್ಪಾ ನಾಡು ಚೆಲ್ವಾಯ್ತು
ಮೆಲ್ಲೆಲರಿ ಪೂತ ಕೊಳಗಳಿಂ ಕೆರೆಗಳಿಂ ಕಾಲ್ಗೊರ್ಳಿಂ ಕೆಯ್ಗಳಿಂ||"

ಆಂಡಯ್ಯನು ವರ್ಣಿಸಿದ ಕನ್ನಡನಾಡಿನ ಪರಿಯನ್ನು ಪರಿಕಿಸಿದಾಗ ಆ ಪ್ರದೇಶ ಉತ್ತರ ಕನ್ನಡವೇ ಎಂಬುದು ಅರಿವಾಗುವದು.

ಆದಿ-ಕವಿ ಪಂಪ ಈ ಮನೋಹರವಾದ ಪ್ರದೇಶದಲ್ಲಿಯೆ ಮತ್ತೊಮ್ಮೆ ಹುಟ್ಟಿಬರಬೇಕೆಂದು ಬಯಸಿದಂತೆಯೇ ೨೦ನೇ ಶತಮಾನದಲ್ಲಿಯೂ ಕವಿ ದಿನಕರ ದೇಸಾಯಿಯವರು (ಕಿ.ಶ. ೧೯೫೫)ರಲ್ಲಿ ಈ ಸಾಲುಗಳಲ್ಲಿ ಹಂಬಲಿಸಿದ್ದಾರೆ.

"ಹುಟ್ಟುವದಾದರೆ ಇನ್ನು ಇನ್ನು"
"ಉತ್ತರ ಕನ್ನಡದಲ್ಲೇ" ಅನ್ನು ||
ಒಂದು ಬದಿ ಸಹ್ಯಾದ್ರಿ ಒಂದು ಬದಿ ಕಡಲು
ನಡುಮಧ್ಯದಲಿ ಅಡಕೆ ತೆಂಗುಗಳ ಮಡಲು
ಸಿರಿಗನ್ನಡದ ಚಪ್ಪರವೆ ನನ್ನ ಜಿಲ್ಲೆ
ಇಲ್ಲಿಯ ಇನ್ನೊಮ್ಮೆ ಹುಟ್ಟುವೆನು ನಲ್ಲೆ||

ರಾಮಾಯಣ ಮಹಾಭಾರತ ಕಾಲದಿಂದಲೂ ಈ ಜಿಲ್ಲೆಯ ಪ್ರದೇಶಗಳು ಪ್ರಸಿದ್ಧಿ ಪಡೆದು ಪೂರ್ವದ ಪುರಾಣ ಕಾವ್ಯಗಳಲ್ಲಿ ಬಣ್ಣಿಸಲ್ಪಟ್ಟಿವೆ. ಪರಶುರಾಮ ಸೃಷ್ಟಿಯ ಭಾಗ-ಕುಂತಲ ದೇಶ ಮುಂತಾದ ಹೆಸರಿನಿಂದ ಕರೆಯಲ್ಪಟ್ಟ ನೆಲವಿದು. ಗೋಕರ್ಣ, ಬನವಾಸಿ, ಯಾಣ, ಸೂಪಾ ಮುಂತಾದ ಸ್ಥಳಪುರಾಣಗಳು ಪ್ರಖ್ಯಾತವಾಗಿವೆ. ಕನ್ನಡದ ಮೊದಲ ಸಾಮ್ರಾಜ್ಯವನ್ನು ಬನವಾಸಿಯ ಕದಂಬರು ಇಲ್ಲಿ ಕಟ್ಟಿದರು. ಶಾತವಾಹನರು, ಶಿಲಾಹಾರರು, ಪಲ್ಲವರು, ಚಾಲುಕ್ಯ ರಾಷ್ಟ್ರಕೂಟರು ಈ ನೆಲವನ್ನು ಆಳಿದ್ದರು. ಗೇರಸೊಪ್ಪೆ, ನಗಿರೆ, ಕೆಳದಿ, ಬಿಳಗಿ, ಮೊದಲಾದ ರಾಜಮನೆತನಗಳು ಇಲ್ಲಿ ಆಡಳಿತ ನಡೆಸಿದ್ದರು. ಹೈದರ ಟಿಪ್ಪುಸುಲ್ತಾನರು ಈ ಜಿಲ್ಲೆಯನ್ನು ತಮ್ಮ ಸ್ವಾಧೀನದಲ್ಲಿರಿಸಿಕೊಂಡಿದ್ದರು. ಬ್ರಿಟೀಶರ ಆಡಳಿತದಲ್ಲಿ ಇಲ್ಲಿಯ ಸಂಪತ್ತು ಸೂರೆಯಾಗಿ ಬೆಂಡಾದ ಈ ಜಿಲ್ಲೆ ಸ್ವಾತಂತ್ರ್ಯ ಹೋರಾಟದಲ್ಲಿ ಅಪ್ರತಿಮ ಸಾಹಸಿಯೆಂಬ ಹೆಸರಿನಿಂದ ದೇಶದಾದ್ಯಂತ ಪ್ರಸಿದ್ಧಿ ಪಡೆಯಿತು. ಇಂದು ಸ್ವತಂತ್ರಭಾರತದ ಕರ್ನಾಟಕ ರಾಜ್ಯದಲ್ಲಿ ಸಮಾವೇಶಗೊಂಡು "ಕನ್ನಡನಾಡಿನ ಕಡಲಿನ ಸೀಮೆ, ಬಣ್ಣಿಸಿದಷ್ಟೂ ಇನ್ನೂ ಕಡಿಮೆ" ಎಂಬ ಹಿರಿಮೆಯಿಂದ ಮೆರೆದಿದೆ.

ಈ ಜಿಲ್ಲೆಯ ವಿಸ್ತಾರ ೧೦೩೨೭ ಚದರ ಕಿಲೋಮೀಟರ. ಅದರಲ್ಲಿ ೮೨೯೨ ಚದರ ಕಿ.ಮಿ. ಅರಣ್ಯ ಆವರಿಸಿದೆ ಆಂದರೆ ಈ ಜಿಲ್ಲೆಯ ೮೦% ರಷ್ಟು ಅರಣ್ಯವೆ ಇದೆ. ಪಡುವಣ ದಿಕ್ಕಿಗೆ ಅರಬ್ಬಿ ಸಮುದ್ರದ ಸೆರಗು ೧೪೪ ಕಿ.ಮಿ. ಉದ್ದವಾಗಿದೆ. ಉತ್ತರ ಕನ್ನಡದಲ್ಲಿ ನಿಸರ್ಗದೇವಿ ತನ್ನ ಚೆಲುವಿನ ಸಿರಿಯನ್ನೇ ಚೆಲ್ಲಿ ನಲಿದು ನರ್ತಿಸುತ್ತಿದ್ದಾಳೆ. ಕಾಡು-ಕಡಲಿನ ನಡುವೆ ಫಲವತ್ತಾದ ನೆಲ. ತೆಂಗು-ಕೌಂಗು-ಹಲಸು- ಮಾವು-ನೇರಲ ಹೀಗೆ ಹಲವು ಹಣ್ಣು ಮರಗಳ ಬನಗಳ ಪಕ್ಕದಲ್ಲಿಯೇ ಬೆಟ್ಟದಲ್ಲಿ ನಂದಿ-ಸಾಗವಾನಿ-ಶ್ರೀಗಂಧ ಮರಗಳ ಜೊತೆಗೆ ನೂರಾರು ಜಾತಿಯ ಸಸ್ಯರಾಶಿಯಿಂದ ಸಮೃದ್ಧವಾದ ಪ್ರಕೃತಿ ಸೌಂದರ್ಯ ವರ್ಣನಾತೀತ! ಕಮನೀಯ ಕರಾವಳಿ, ಮೈಸಿರಿಯಿಂದ ಮನಸೆಳೆವ ಮಲೆನಾಡು, ಬೆಡಗಿನ ಬೆಳವಲ ಈ ಮೂರು ಸ್ವಾಭಾವಿಕ ಭೌಗೋಳಿಕ ವಿಭಾಗಗಳು ಈ ಜಿಲ್ಲೆಗೆ ಮಾತ್ರ ಲಭಿಸಿವೆ. ಇದರಿಂದಾಗಿ ಈ ಜಿಲ್ಲೆ ನಿಸರ್ಗ ಸ್ವರ್ಗವೇ ಆಗಿದೆ.

ಇಲ್ಲಿಯ ಹೊಳೆ-ಹಳ್ಳ-ಝುರಿ-ಅಳವೆ-ಕೂರ್ವೆ-ಗಿರಿ-ಕಂದರ-ಕಡಲ ಬಯಲುಗಳ ಸೌಂದರ್ಯ ಒಂದೊಂದು ಕಡೆ ಒಂದೊಂದು ತೆರ. ಒಂದರಂತೆ ಒಂದಿಲ್ಲ. ಒಂದು ಇನ್ನೊಂದಕ್ಕೆ ಹಿಂದಿಲ್ಲ. ಇವುಗಳ ನಡುವೆ ಸಂಚರಿಸುವ ಮತ್ಸ್ಯ-ಮೃಗ-ಖಗಗಳಿಗೆ ಎಣೆಯಿಲ್ಲ. ಇವೆಲ್ಲವನ್ನು ನೋಡುತ್ತ ವಿಹರಿಸುವ ಮನಕ್ಕೆ ದಣಿವಿಲ್ಲ "ಸ್ವರ್ಗ ನಿಸರ್ಗವು ಸೊಬಗಿನ ದಿಬ್ಬ, ಎಲ್ಲಾಕಡೆಯೂ ಕಣ್ಣಿಗೆ ಚೆಲುವಿನ ಹಬ್ಬ". ಇಂತಿರುವ

ನೆಲೆಯಲ್ಲಿ ಈ ತಾಣವೇ ಪ್ರೇಕ್ಷಣೀಯ ಎಂದು ಬೊಟ್ಟುಮಾಡಿ ತೋರುವದು ಕಷ್ಟವಾದರೂ ನೈಸರ್ಗಿಕ, ಐತಿಹಾಸಿಕ, ಧಾರ್ಮಿಕ, ಔದ್ಯಮಿಕ ಮೊದಲಾದ ದೃಷ್ಟಿಯಿಂದ ಪರಿಶೀಲಿಸಿ ಕೆಲವು ಸ್ಥಳಗಳನ್ನು ಆಯ್ದು ಈ ಹೊತ್ತಿಗೆಯಲ್ಲಿ ನಿವೇದಿಸಲಾಗಿದೆ. ಇಲ್ಲಿ ಹೇಳದೇ ಬಿಟ್ಟ ಕೆಲಸ್ಥಳಗಳಲ್ಲಿಯೂ ರಸಿಕರು ಗುಣಾಕರ್ಷಯನ್ನು ಗುರುತಿಸಬಹುದಾಗಿದೆ.

**ಘಟ್ಟಗಳ ಗಾಡಿ ಮೋಡಿ!:** ಪ್ರವಾಸಿಗಳು ಕರಾವಳಿ ಪ್ರದೇಶಕ್ಕೆ ಕಾಲಿಡುವಾಗ ಸಹ್ಯಾದ್ರಿ ಬೆಟ್ಟಗಳ ಸಾಲುಗಳನ್ನು ದಾಟಿ ಇಳಿದು ಬರಬೇಕಾಗುತ್ತದೆ. ಆಗ ಬಸ್ಸು ನಾಗಮುರಿಗೆ ಮಾರ್ಗದಲ್ಲಿ ಸಾಗಿ ಬರುವಾಗ ಕಾಣುವ ಪರ್ವತ ಶ್ರೇಣಿ ಮೇಘಮಾಲೆಯನ್ನು ತೊಟ್ಟು ಶೋಭಿಸಿದರೆ ಅದರ ಪಕ್ಕದಲ್ಲೆ ಕಣ್ಣು ತಿರುಗುವ ಕಡಿದಾದ ಕಂದಕ! ನಡುವೆ ಅಲ್ಲಲ್ಲಿ ತರತರವಾಗಿ ತೋರುತ್ತ ರುದ್ರರಮಣೀಯವಾಗಿ ರೋಮಾಂಚಾನುಭವ ನೀಡುವ ಈ ಘಟ್ಟದ ರಸ್ತೆಗಳ ಪ್ರಯಾಣ ಚಿರಸ್ಮರಣೀಯವಾಗಿರುವದು. ಉತ್ತರ ಕನ್ನಡದಲ್ಲಿ ಅಲ್ಲಲ್ಲಿ ಘಟ್ಟಗಳು ನೂರಾರು ಇದ್ದು ಅವುಗಳಲ್ಲಿ ದೊಡ್ಡವೂ ಪ್ರಾಮುಖ್ಯವಾದವುಗಳೆಂದರೆ **ಅರಬೈಲು, ದೇವಿಮನೆ, ಮಲಮನೆ, ದೊಡ್ಡಮನೆ, ಮತ್ತಿ, ವಡ್ಡಿ, ಹೈದರ, ಕುಂಡಾಲ, ನೀಲಕುಂದ, ಹೊಗೆವಾಡಿ, ದೋಕರ್ಪ, ತಿನ್ನೆ, ಡಿಗ್ಗಿ, ಅಣಶಿ, ಕುವೇಶಿ.** ಈ ಘಟ್ಟಗಳಲ್ಲಿ ಒಂದೊಂದು ತಿರುವಿಗೂ ಕಾಣುವ ರಮ್ಯದೃಶ್ಯಾವಳಿಗಳಿಂದ ಮನಸೂರೆಗೊಂಡು ಸಾಗಿ ಬಂದದಾರಿಯ ದೂರ ಹಾಗು ಪ್ರಯಾಣದ ಆಯಾಸದ ಅರಿವೇ ಆಗುವುದಿಲ್ಲ. ಘಟ್ಟವನ್ನು ಇಳಿದು ಕರಾವಳಿಯ ಬೈಲು ಪ್ರದೇಶಕ್ಕೆ ಕಾಲಿಟ್ಟೊಡನೆ ಅಡಿಕೆ-ತೆಂಗು-ಹಲಸು-ಮಾವು-ಬಾಳೆಗಳಿಂದ ಶೋಭಿಸುವ ಚಿಕ್ಕ ಚಿಕ್ಕ ಹಳ್ಳಿಗಳು ನಳನಳಿಸುವ ನೆಲ್ಲುಗದ್ದೆಗಳ ನಡುವೆ ಕಂಗೊಳಿಸುತ್ತವೆ.

# ೧. ಜಲಪಾತಗಳು

ಉತ್ತರ ಕನ್ನಡ ಜಿಲ್ಲೆಯಲ್ಲಿರುವಷ್ಟು ಜಲಪಾತಗಳು ಭಾರತದ ಮತ್ತಾವ ಜಿಲ್ಲೆಯಲ್ಲಿಯೂ ಇಲ್ಲ. ಚಿಕ್ಕ ಪುಟ್ಟ ಜಲಪಾತಗಳು ಮಳೆಗಾಲದಲ್ಲಿ ಮಾತ್ರ ಗೋಚರಿಸುವ ಜಲಪಾತಗಳು ನೂರಾರು! ಯಲ್ಲಾಪುರ ತಾಲೂಕು ಒಂದರಲ್ಲೆ ಹೆಸರಿಸಬಹುದಾದ ಹದಿನೆಂಟು ಜಲಪಾತಗಳಿವೆ. ಅನೇಕ ಜಲಪಾತಗಳನ್ನು ಕಾಣಬೇಕಾದರೆ ದಟ್ಟಕಾಡಿನಲ್ಲಿ ಕಾಲ್ನಡೆಯಲ್ಲಿ ದುರ್ಗಮದಾರಿ ಕ್ರಮಿಸಬೇಕಾಗಿದೆ. ಹಿರಿದಾದ ಪ್ರೇಕ್ಷಣೀಯವೆಂದು ಪ್ರಸಿದ್ಧವಾದ ಕೆಲವುಗಳನ್ನು ನಿವೇದಿಸಲಾಗಿದೆ.

**ಜೋಗದ ಜಲಪಾತ :** "ಮಾನವನಾಗಿ ಹುಟ್ಟದ ಮೇಲೆ ಏನೇನ ಕಂಡಿ? ಸಾಯೋದ್ರೊಳಗೆ ಕಾಣಬೇಕೊಮ್ಮೆ ಜೋಗದ ಗುಂಡಿ" ಎಂಬ ಹಾಡು ಜನಜನಿತವಾಗಿದೆ. ಗೇರಸೊಪ್ಪೆ ದಭದಭೆ ಎಂದೂ ಇದಕ್ಕೆ ಹೆಸರಿದೆ. ಉತ್ತರಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳ ಗಡಿಯಲ್ಲಿ ಈ ಜಲಪಾತವಿದ್ದು ಶರಾವತಿ ನದಿಯೂ ೨೫೨ ಮಿಟರ ಎತ್ತರದಿಂದ ೧೧೭ ಮಿಟರ ಆಳದ ಹೊಂಡದಲ್ಲಿ ಧುಮುಕುತ್ತದೆ. ವೀರ, ಭೀಭತ್ಸ, ಶೃಂಗಾರ, ಶಾಂತರಸಗಳೇ ಪ್ರವಹಿಸುವಂತೆ ರಾಜ-ಅಬ್ಬರ-ಬಾಣ-ರಾಣಿ (ಗೌರವನಿತೆ) ಎಂಬ ನಾಲ್ಕು ವಾಹಿನಿಗಳಾಗಿ ಕೆಳಗುರುಳುವಾಗಿನ ರಮ್ಯನೋಟದಿಂದ ನಯನ ಪಾವನವಾಗುವದು. ರಾಜನ ಗಾಂಭೀರ್ಯ, ಅಬ್ಬರದ ಆರ್ಭಟ, ಬಾಣದ ಹನಿಯ ಹಾರುವಿಕೆಯಲ್ಲಿ ಕಂಗೊಳಿಸುವ ಹಲವು ಕಾಮನಬಿಲ್ಲುಗಳ ಮಾಟ, ಗೌರವನಿತೆಯ ನೀರು ನೊರೆನೊರೆಯಂತೆ ಹಾಲಿನಂತೆ ನಯವಾಗಿ ಇಳಿವ ನೋಟ ನೋಡುಗರನ್ನು ಮಂತ್ರಮುಗ್ಧರನ್ನಾಗಿಸುವದು. ಅಮೇರಿಕೆಯ ನೈಗೆರಾ ಜಲಪಾತದ ಅಗಲ ಹೆಚ್ಚಿದ್ದರೂ ಕೇವಲ ೧೬೪ ಅಡಿ ಆಳಕ್ಕೆ ಧೂಮಕುವದು. ಯುರೋಪಿನ ಎವಾನ್‌ಸನ್ (೧೨೦೦ ಅಡಿ) ಮತ್ತು ಕೆರೊಸೂಲಿ (೨೪೦೦ ಅಡಿ) ಎತ್ತರವಾಗಿದ್ದರೂ ಅವುಗಳ ಪ್ರವಾಹ ಅತಿ ಕಡಿಮೆಯಾದ್ದರಿಂದ ಅವು ಜೋಗ ಜಲಪಾತದಷ್ಟು ಸುಂದರವಾಗಿಲ್ಲ. ಜೋಗದ ಸುತ್ತಲಿನ ಕಂದರ-ಪರಿಸರ ಸುಂದರ. ಜಲಪಾತದ ಎರಡು ದಂಡೆಗಳಲ್ಲು ಪ್ರವಾಸಿಮಂದಿರಗಳಿವೆ. ಮಳೆಗಾಲದಲ್ಲಿ ಗೇರಸೊಪ್ಪೆ ಧಬಧಬೆಯ ದರ್ಶನ ಮರೆಯಲಾಗದ ಅನುಭವ, ಕಣಿವೆಯ ತುಂಬೆಲ್ಲ ಮೋಡ ಕವಿದು ಕಣ್ಣು ಮುಚ್ಚಾಲೆಯಾಡುವ ಜಲಪಾತ ತುಂಬಿ ಹರಿಯುವ ದೃಶ್ಯ ಅದ್ಭುತ. ಸುತ್ತಲು ಮೇಘಾವೃತ ವರ್ತುಲ. ಕ್ಷಣದಲ್ಲಿ ಜೋಗ ಅದೃಶ್ಯ. ನಾವು ಭೂಮಿಯಲ್ಲಿರುವೆವೆ? ಆಕಾಶದಲ್ಲಿರುವೆವೆ? ಎನ್ನುತ್ತಿರುವಂತೆ ಮತ್ತೆ ಮೋಡ ಸರಿದು ಹೊಗೆ ಹರಿದು ಜೋಗದರ್ಶನ! ಅಪೂರ್ವ ಅನುಭವ!

ಹೊಳೆಯ ಬೀಳುವಿಕೆಯಲ್ಲಿ ಬೆಳಕನ್ನು ನೀಡುವ ಜೋಗದ ಜ್ಯೋತಿ ರಾಜ್ಯ-ನೆರೆ ರಾಜ್ಯಗಳನ್ನು ಇಂದು ಬೆಳಗುತ್ತಿದೆ. ಹತ್ತಿರವೆ ಇರುವ ಲಿಂಗನಮಕ್ಕಿ ಆಣೆಕಟ್ಟು-ಪ್ರೊಜೆಕ್ಟಗಳು ಮತ್ತು ಮಹಾತ್ಮಾಗಾಂಧಿ ಹೈಡ್ರೊ-ಇಲೆಕ್ಟ್ರಿಕ್ ವರ್ಕ್ಸಗಳ ತಾಣಗಳನ್ನು ಸಂದರ್ಶಿಸಿದಲ್ಲಿ ವೈಜ್ಞಾನಿಕ ಹಾಗು ಶೈಕ್ಷಣಿಕ ದೃಷ್ಟಿಯಿಂದ ತುಂಬಾ ಪ್ರಯೋಜನವಾಗುವದು. ಸುತ್ತಲಿನ ಪ್ರೇಕ್ಷಣೀಯ ಸ್ಥಳಗಳಿಗೆ ಹೋಗಲು ಬಸ್ಸು-ಟ್ಯಾಕ್ಸಿಗಳಿವೆ; ಹೊಟೇಲುಗಳಿವೆ. ಶಿರಸಿ, ಸಿದ್ದಾಪುರ ಸಾಗರ, ಶಿವಮೊಗ್ಗಾಗಳ ಮೂಲಕ ಜೋಗನ್ನು ತಲುಪಬಹುದು. ರೈಲಿನಲ್ಲಿ ಹೋಗಿ ನೋಡುವುದಾದಲ್ಲಿ ತಾಳಗುಪ್ಪಾ ಸ್ಟೇಶನ್ ಅತಿ ಸಮೀಪದಲ್ಲಿದೆ.

**ಮಾಗೋಡ ಜಲಪಾತ :** ಯಲ್ಲಾಪುರದಿಂದ ೨೦ ಕಿ.ಮಿ. ದೂರದಲ್ಲಿ ಗಂಗಾವಳಿ ನದಿಯು ೧೮೦ ಮೀಟರ ಎತ್ತರದಿಂದ ಅವಳಿ-ಜವಳಿ ಮತ್ತು ಮುಕ್ತಪಾಣಿ ಮೂರು ಕವಲುಗಳಾಗಿ ಧುಮುಕುತ್ತದೆ. ಸುಂದರವಾದ ಈ ಜಲಪಾತಕ್ಕೆ ಹೋಗುವದಾರಿ ಹಾಗು ವೀಕ್ಷಿಸುವ ನೆಲೆ ಕೆಲದಿನ ಹಿಂದನವರೆಗೂ ದುರ್ಗಮವಾಗಿಯೆ ಇತ್ತು. ಈಗ ಇಲ್ಲಿ ಒಂದು ಪ್ರವಾಸಿಮಂದಿರ ನಿರ್ಮಿಸಿದ್ದಾರೆ. ಬಸ್ಸಿನ ದಾರಿಯಾಗಿದೆ. ಹೊಲತಿಕೋಟೆ ಎಂಬ ಚಕ್ರವ್ಯೂಹಾಕೃತಿಯಲ್ಲಿ ಕಟ್ಟಲ್ಪಟ್ಟ ಕೋಟೆಯ ಮೂರು ದಿಕ್ಕಿಗೆ ನದಿ ಆವರಿಸಿದೆ. ಸಂಶೋಧನೆ ನಡೆಸಿದಲ್ಲಿ ಈ ವಿಶಿಷ್ಟ ಕೋಟೆಯ ಸಾಂಸ್ಕೃತಿಕ ಮಹತ್ವದ ಅರಿವು ಆದೀತು. ಸೋಂದೆಯ ಅರಸನು ಹೊಲತಿಜಾತಿಯ ಹುಡುಗಿಯನ್ನು ಮೆಚ್ಚಿ ಈ ಕೋಟೆಯನ್ನು ಕಟ್ಟಿಸಿ ಅವಳಿಗೆ ವಾಸಿಸಲು ಅನುವು ಮಾಡಿಕೊಟ್ಟನೆಂಬ ಪ್ರತೀತಿ ಇದೆ. ಅದರಿಂದ ಈ ಕೋಟೆಗೆ ಹೊಲತಿಕೋಟೆ ಎಂಬ ಹೆಸರು. ಹಾಗೆಯೆ ಮಾಗೋಡ ಜಲಪಾತಕ್ಕೂ "ಹೊಲತಿಜಲಪಾತ" ಎಂಬ ಹೆಸರು ಪ್ರಸಿದ್ಧವಾಗಿದೆ. ಮಾಗೋಡುಜಲಪಾತ ಹಾಗು ಕೋಟೆ ಎರಡೂ ಸೇರಿ ಪ್ರವಾಸಿಗರನ್ನು ತಮ್ಮೆಡೆಗೆ ಸೆಳೆಯುವವು.

**ಲಾಲಗುಳಿ ಜಲಪಾತ :** ಯಲ್ಲಾಪುರದ ಉತ್ತರಕ್ಕೆ ೧೫ ಕಿ.ಮಿ. ಅಂತರದಲ್ಲಿ ಲಾಲುಗುಳಿ ಹಳ್ಳಿಯ ಬಳಿ ತಟ್ಟಿಹಳ್ಳವು ಕಾಳಿನದಿಗೆ ಸೇರುವ ಸ್ಥಳದಲ್ಲಿ ಅನೇಕ ಹಂತದಲ್ಲಿ ಮೆಟ್ಟಲಿಂದ ಮೆಟ್ಟಿಲಿಗೆ ಹಾರುತ್ತ ಒಟ್ಟು ೯೧ ಮೀಟರದ ಆಳದ ಮಾಲಾಜಲಪಾತವನ್ನು ಸೃಷ್ಟಿಸಿದೆ. ಜಲಪಾತದ ದೃಶ್ಯ ವಿಶಿಷ್ಟ ರೀತಿಯ ರಮ್ಯತೆಯನ್ನು ಪ್ರದರ್ಶಿಸುತ್ತದೆ. ಮನಕ್ಕೆ ಮುದನೀಡುತ್ತದೆ. ಎತ್ತರದ ಗುಡ್ಡದಮೇಲೆ ಕೋಟೆಯಾಕಾರದ ನೆಲೆಯಿದ್ದು ಅಲ್ಲಿಯ ಹನುಮಂತನ ಮುರ್ತಿ ಆರು ಅಡಿ ಎತ್ತರವಿದೆ. ಕೋಟೆಯ ನೆತ್ತಿಯಲ್ಲಿ ನಿಂತು ಕಾಳಿನದಿ ಕಣಿವೆಯಲ್ಲಿ ಹರಿದು ಹೋಗುವ ಐದಾರು ಕಿಲೋಮಿಟರ ದೂರದ ದೃಶ್ಯವನ್ನು ನೋಡಿ ನಲಿಯಬಹುದು. ಸೋಂದೆಯ ಅರಸರು ಅಪರಾಧಿಗಳನ್ನು ಈ ಶಿಖರಕ್ಕೆ ಎಳೆತಂದು ಮೇಲಿಂದ ಕೆಳಗುರುಳಿಸಿ ಕೊಲ್ಲುತ್ತಿದ್ದರಂತೆ.

**ಉಂಚಳ್ಳಿ ಜಲಪಾತ :** ಸುಂದರವಾದ ಈ ಜಲಪಾತದ ತಟಕ್ಕೆ ಹೋಗಲು ಇನ್ನೂ ಸರಿಯಾದ ದಾರಿಯಾಗಿಲ್ಲ. ಸಿದ್ದಾಪುರದಿಂದ ૩೫ ಕಿ.ಮಿ. ದೂರದಲ್ಲಿ ಉಂಚಳ್ಳಿ ಇದೆ. ಸಿದ್ದಾಪುರ ಕೋಲ್‌ಶಿರಸಿ ಹೆಗ್ಗರಣಿ ಮಾರ್ಗವಾಗಿ ಉಂಚಳ್ಳಿಯನ್ನು ತಲುಪಬಹುದು. ಅಘನಾಶಿನಿ ನದಿಯು ೧೧೬ ಮೀಟರ ಆಳದಲ್ಲಿ ಬೆಳ್ಳಿಯ ರಥದಂತೆ ಕಂಗೊಳಿಸುತ್ತದೆ. ವಿರುದ್ಧ ದಿಕ್ಕಿನಲ್ಲಿ ಸುಮಾರು ೧.೫ ಕಿ.ಮಿ. ಕೆಳಗಿಳಿದು ನೋಡಿದಾಗ ಮೊದಲು ಹೊಳೆ ಅಗಲವಾಗಿ ಬಿದ್ದು ನಂತರ ಕಂದರದಲ್ಲಿ ಜಾರುವದು. ಕಂದರದಲ್ಲಿ ಬೀಳುವಾಗ ಬಹಳ ದೊಡ್ಡ ಶಬ್ದವಾಗುವದು. ಈ ಸಪ್ಪಳವು ಬಹುದೂರದವರೆಗೂ ಕೇಳುವದರಿಂದ ಈ ಜಲಪಾತಕ್ಕೆ "ಕೆಪ್ಪ-ಜೋಗು" ಎಂದೂ ಕರೆಯುವರು. ಸಮೃದ್ಧವಾದ ಹಸಿರಡವಿಯಿಂದ ಆವೃತ್ತವಾದದ್ದರಿಂದ ಈ ಜಲಪಾತದ ಸೌಂದರ್ಯ ಹೆಚ್ಚಿದೆ. ೧೮೪೫ ರಲ್ಲಿ ಬ್ರಿಟೀಶ್ ಕಲೆಕ್ಟರನಾದ ಲುಶಿಂಗಟನ್ ಎಂಬುವನು ಜಲಪಾತದ ನೋಟಕ್ಕೆ ಒಲಿದು ಸದಾ ಅಲ್ಲಿಗೆ ಹೋಗುತ್ತಿದ್ದುದರಿಂದ ಈ ಜಲಪಾತದ ಪ್ರಸಿದ್ಧಿ ಹೆಚ್ಚಿ "ಲುಶಿಂಗಟನ್ ಜಲಪಾತ"ವೆಂತಲೂ ಕರೆಸಿಕೊಳ್ಳುತ್ತಿತ್ತು.

**ಶಿವಗಂಗೆ ತಡಸಲು :** ನಿಸರ್ಗ ರಮಣೀಯ ಸ್ಥಳಗಳಲ್ಲಿ ಶಿವಗಂಗೆ ಜಲಪಾತವೂ ಒಂದು. ಶಿರಸಿಯಿಂದ ೨೨ ಕಿ.ಮಿ. ದೂರ ಮೆಣಶಿ ಸೀಮೆಯಲ್ಲಿ ಗಣೇಶಪಾಲ ಹೊಳೆಯು ೭೪ ಮೀಟರ ಆಳದವರೆಗೆ ಎರಡು ಮೆಟ್ಟಲಾಗಿ ಬೀಳುವ ಪರಿ ತುಂಬಾ ಸೊಗಸು. ನೀರು ಬೀಳುವ ಇಕ್ಕೆಲದಲ್ಲಿ ಕರಿಕಲ್ಲಿನ ಗೋಡೆಗಳಂತೆ ಅಖಂಡ ಶಿಲೆಗಳಿದ್ದು ಎದುರುಗಡೆಯ ಬಂಡೆಗಳಲ್ಲಿ ಜೋಗಿಯೊಬ್ಬನ ಚಿತ್ರ, ಪಕ್ಷಿ ಕುದುರೆ ಹಾಗೂ

ಶಿಲಾಲೇಖಗಳು ಕೆತ್ತಲ್ಪಟ್ಟಿವೆ. ಕೆಳಗೆ ಮಡುವಿನಲ್ಲಿ ಗಣೇಶ, ಶಿವ ಗಂಗೆಯರ ಮೂರ್ತಿಗಳಿವೆಯಂತೆ. ಗಣೇಶ ಪಾಲ ಹೊಳೆಯಿಂದಾದ ಈ ಧಬಧಬೆಗೆ ಗಣೇಶ ಧಬಧಬೆಯೆಂದೂ ಕರೆಯುವರು.

**ಬುರಡೆ ಜೋಗು :** ಸಿದ್ದಾಪುರದಿಂದ ದೊಡ್ಮನೆ ಮಾರ್ಗವಾಗಿ ಕುಮಟೆಗೆ ಹೋಗುವ ಮಾರ್ಗದಲ್ಲಿ ಇಳಿಮನೆ ಗ್ರಾಮದಿಂದ ನಾಲ್ಕು ಕಿಲೋಮೀಟರ ಕ್ರಮಿಸಿದರೆ ಇಳಿಮನೆ ಹೊಳೆಯು ಸುಮಾರು ೬೦ ಮೀಟರ ಕೆಳಗುರುಳಿ ನಂತರ ಎರಡು ಕವಲಾಗಿ ಮತ್ತೆ ೪೫ ಮೀಟರ ಹಾರಿ ಸುಂದರ ಜಲಪಾತವನ್ನುಂಟು ಮಾಡಿದೆ.

**ದೇವ್ಕಾರ ಜಲಪಾತ :** ಯಲ್ಲಾಪುರದಿಂದ ಕಳಚೆ ಕೊಡಸಳ್ಳಿ ಮಾರ್ಗವಾಗಿ ೪೦ ಕಿ.ಮೀ. ದೂರದಲ್ಲಿ ಪ್ರಕೃತಿರಮ್ಯ ಪರಿಸರ, ಗಗನ ಚುಂಬಿತ ವೃಕ್ಷಗಳು, ಪಕ್ಷಿಪ್ರಾಣಿಸಂಕುಲದ ನೆರೆಯಲ್ಲಿ ನಡೆಯುತ್ತ ಹೋಗಿ ದೇವ್ಕಾರ ಜಲಪಾತವನ್ನು ನೋಡಿದಾಗ ಆದ ಆಯಾಸವೆಲ್ಲ ಮಾಯವಾಗುವದು. ಈ ಜಲಪಾತವನ್ನು ನೋಡಲು ಡಿಸೆಂಬರ-ಜನವರಿ ತಿಂಗಳುಗಳು ಸರಿಯಾದ ಸಮಯ. ಹಾಲಿನಂತೆ ಧುಮುಕುವ ತಡಸಲು ನಯನ ಮನೋಹರ.

**ದಬ್ಬೆಸಾಲ ಜಲಪಾತ :** ಸಾತೊಡ್ಡಿ ಜಲಪಾತವೆಂತಲೂ ಹೆಸರಿರುವ ಈ ಸ್ಥಳಕ್ಕೆ ಯಲ್ಲಾಪುರದಿಂದ ಬಸ್ಸಿನ ಸೌಕರ್ಯವಿದೆ. ಯಲ್ಲಾಪುರದಲ್ಲಿ ಹುಟ್ಟಿದ ಕಳ್ಳರ ಮನೆ ಹಳ್ಳವೇ ಮುಂದೆ ದಬ್ಬೆಸಾಲ ಹೊಳೆಯಾಗಿ ದಬ್ಬೆಸಾಲಿನಲ್ಲಿ ೩೨ ಮೀಟರ ಎತ್ತರದಿಂದ ಎರಡುಹಂತದಲ್ಲಿ ಧುಮುಕಿದ ವರ್ಷವಿಡೀ ವೀಕ್ಷಿಸಬಹುದಾದ ರಮಣೀಯ ಜಲಪಾತವಿದು. ಹತ್ತಿರದ ಗಣೇಶಪಾಲ ಹಳ್ಳಿಯಲ್ಲಿ ಪ್ರವಾಸಿಮಂದಿರವಿದೆ. ಕಾರವಾರದಿಂದ ೬೫ ಕಿ.ಮೀ. ಕ್ರಮಿಸಿ ಈ ಸ್ಥಳಕ್ಕೆ ಬರಬಹುದು.

**ಅಂಬೆಹೊಳೆ ಜಲಪಾತ :** ಯಲ್ಲಾಪುರದಿಂದ ವಜ್ರಹಳ್ಳಿಗೆ ಹೋಗಿ ಮುಂದೆ ೩ ಕಿ.ಮೀ. ಕ್ರಮಿಸಿದರೆ ದಟ್ಟ ಕಾಡಿನ ನಡುವೆ ಅಂಬೆಹೊಳೆ ಎರಡು ಸುಂದರವಾದ (ಜವಳಿ) ಜಲಪಾತವನ್ನು ನಿರ್ಮಿಸಿದೆ. ಸುಮಾರು ೧೦೦ ಮೀಟರ ಎತ್ತರದಿಂದ ಬೀಳುತ್ತಿರುವ ಜಲಪಾತದ ಬಳಿ ಮನೆಯಾಕಾರದಲ್ಲಿ ಮಾಡುಮಾಡಿದ ಕಲ್ಲು ಬಂಡೆಗಳು ಇವೆ. ಕರಡಿ ಗುಹೆ, ಬಾವುಲಿ ಗುಹೆಗಳು ಇಲ್ಲಿವೆ.

**ಹಸೆಹಳ್ಳ ಜಲಪಾತ :** ಶಿರಸಿಯಿಂದ ೪೦ ಕಿ.ಮಿ. ದೂರದಲ್ಲಿ ಮತ್ತಿಘಟ್ಟದ ಬಳಿ ಸುಂದರವಾದ ಪರಿಸರದಲ್ಲಿ ಸದಾಕಾಲ ಹರಿಯುವ ಹಸೆಹಳ್ಳವು ೬೪ ಮೀಟರ ಎತ್ತರದಿಂದ ಕಣಿವೆಯಲ್ಲಿ ಬಿದ್ದು ಗಂಗಾವಳಿ ನದಿಯನ್ನು ಕೂಡುತ್ತದೆ. ಈ ಜಲಪಾತಕ್ಕೆ ಹೆಗಡೆಕಟ್ಟಾ-ದೇವನಹಳ್ಳಿಯಿಂದ ಮುಂಡಗನ ಮನೆಯವರೆಗೆ ಕಾರಿನಲ್ಲಿ ಹೋಗಿ ಮುಂದೆ ೫ ಕಿ.ಮೀ. ಅಡವಿಯಲ್ಲಿ ನಡೆಯಬೇಕು. ಸರಿಯಾದ ಸಂಚಾರ ವ್ಯವಸ್ಥೆಯಾದರೆ ಇದೊಂದು ಉತ್ತಮ ಪ್ರವಾಸಿತಾಣವಾಗಬಲ್ಲುದು.

**ಸುಸುಬ್ಬಿ ಜಲಪಾತ :** ಶಿರಸಿಯಿಂದ ವಾನಳ್ಳಿ-ಕಕ್ಕಳ್ಳಿ ಮಾರ್ಗವಾಗಿ ಮುಂದೆ ೫ ಕಿ.ಮೀ. ನಡೆದರೆ ಕಕ್ಕಳ್ಳಿ ಹಳ್ಳ (ಬಿಳಿಹೊಳೆ) ೧೧ ಮೀಟರ ಎತ್ತರದಿಂದ ಸದಾ ಹಸಿರಾಗಿರುವ ಗುಡ್ಡದ ಇಳುಕಲಿನಲ್ಲಿ ಧುಮುಕುವ ದೃಶ್ಯ ಉತ್ಕೃಷ್ಟವಾಗಿದೆ. ಶಿರಸಿಯಿಂದ ಸುಮಾರು ೩೦ ಕಿ.ಮೀ. ಅಂತರದಲ್ಲಿ ಈ ಜಲಪಾತವಿದೆ.

**ವಿಂಚೊಳ್ಳಿ ಜಲಪಾತ :** ಹಳಿಯಾಳದಿಂದ ೩೮ ಕಿ.ಮೀ. ದೂರದಲ್ಲಿ ದಟ್ಟಕಾಡುಗಳ ನಡುವೆ ಈ ವರೆಗೂ ಸರಿ ರಸ್ತೆಯಿಲ್ಲದ ಒಂದು ಸುಂದರ ವಿಹಾರಕ್ಷೇತ್ರ ಈ ವಿಂಚೊಳ್ಳಿ ಜಲಪಾತ ಕಾಳಿನದಿಯು ಇಳಿಜಾರಿನಲ್ಲಿ ರಭಸದಿಂದ ಹರಿದು ನೀರಿನ ನೊರೆಯನ್ನು ಉಕ್ಕಿಸಿ ಜಾರು ಜಲಪಾತವಾಗಿ ಹರಿದಿದೆ. ಘಟ್ಟವನ್ನು ೩೦೦ ಮೀಟರ ಕೆಳಗಿಳಿದು ಹೋಗಿ ಈ ನೀರಿನ ಇಳಿಜಾರನ್ನು ವೀಕ್ಷಿಸಿ ಆನಂದಿಸಬೇಕು.

**ಅಣಶಿ ಜಲಪಾತ :** ಅಣಶಿ ಬಳಿ ಸುಮಾರು ೪೫ ಮೀಟರ ಎತ್ತರದಿಂದ ರಭಸದಿಂದ ಮಳೆಗಾಲದಲ್ಲಿ ಮಾತ್ರ ಗೋಚರಿಸುವ ಈ ಜಲಪಾತ ಸುಂದರವಾಗಿದೆ.

**ಮಲೆಮನೆ ಜಲಪಾತ :** ದೊಡ್ಡಮನೆಯಿಂದ ೪ ಕಿ.ಮೀ. ಕಾಡುದಾರಿ ಸಾಗಿದರೆ ಮಳೆಗಾಲದಲ್ಲಿ ೨೩೦ ಮೀಟರ ಎತ್ತರದಿಂದ ಬೀಳುವ ಭವ್ಯ ಬುರುಗಿನ ಮಲೆಮನೆ ಜಲಪಾತವು ಮನವನ್ನು ಮಂತ್ರಮುಗ್ಧವಾಗಿಸುವದು. ಈ ರೀತಿಯಲ್ಲಿ ಜೂನದಿಂದ ಡಿಸೆಂಬರದ ವರೆಗೆ ಕಂಗೊಳಿಸುವ ಅನೇಕ ಹಿರಿ ಕಿರಿ ಜಲಪಾತಗಳನ್ನು ಬೆಟ್ಟದ ಸಾಲುಗಳಲ್ಲಿ ಜಿಲ್ಲೆಯ ತುಂಬ ಕಾಣಬಹುದು.

## ೩. ಗಿರಿಧಾಮಗಳು

ಅನಂತ ಆನಂದವನ್ನು ನೀಡುವ ಗಿರಿಧಾಮಗಳಿಗೆ ಈ ಜಿಲ್ಲೆಯಲ್ಲಿ ಕೊರತೆಯಿಲ್ಲ. ಇಲ್ಲಿಯ ಸಹ್ಯಾದ್ರಿಸಾಲುಗಳ ಸರಾಸರಿ ಎತ್ತರ ೭೦೦ ಮೀಟರುಗಳು. ೯೦೦ ಮೀಟರ ಎತ್ತರದ ಪರ್ವತಗಳೂ ಇಲ್ಲಿವೆ. ಸಾಮಾನ್ಯವಾಗಿ ೬೦ ರಿಂದ ೯೦ ಮೀಟರ ಎತ್ತರದಗುಡ್ಡಗಳು ಅಲ್ಲಲ್ಲಿ ಇವೆ.

**ಗುಡ್ಡೆಹಳ್ಳಿ :** ಕಾರವಾರದಿಂದ ೧೦ ಕಿ.ಮೀ. ದೂರದಲ್ಲಿ ೫೫೦ ಮೀಟರ ಎತ್ತರದಲ್ಲಿ ಗುಡ್ಡೆಹಳ್ಳಿಯಿದೆ ಹಾಲಕ್ಕಿ ಒಕ್ಕಲ ವಸತಿ ಇದೆ. ಹವೆ ತಂಪಾಗಿದೆ. ಪುಣೆ-ಮುಂಬೈ ನಡುವಿನ ಲೋಣಾವಳದಷ್ಟೆ ಎತ್ತರದಲ್ಲಿದ್ದ ಈ ಹಳ್ಳಿಯಿಂದ ಸಮುದ್ರದ ದೃಶ್ಯ ಸೊಗಸಾಗಿ ಕಾಣುವದು. ಭಾರತದಲ್ಲಿಯೇ ಸಮುದ್ರದಿಂದ ಇಷ್ಟು ಸಮೀಪವಿದ್ದು ಇಷ್ಟು ಎತ್ತರದಲ್ಲಿದ್ದ ಸ್ಥಾನ ಇನ್ನೊಂದಿಲ್ಲ. ಅತ್ಯುತ್ತಮ ಗಿರಿನಿವಾಸವಿದೆಂದು ಮನಗಂಡು ಏ.ಎಂ. ಸ್ಟೈನ್ಯ (ಮಿ ಬಿಲ್?) ಎಂಬ ಬ್ರಿಟೀಶ ಅಧಿಕಾರಿ ಇಲ್ಲಿ ಬಂಗ್ಲೆ ಕಟ್ಟಿಸಿದ್ದನು. ಅದನ್ನು ಇಂದಿಗೂ ಗುರುತಿಸಬಹುದು. ಇಷ್ಟು ಎತ್ತರದಲ್ಲಿಯೂ ನೀರಿನ ಒರತೆ ಸಾಕಷ್ಟಿದೆ. ಇಂತಹ ಪ್ರದೇಶದ ಹವೆ ಇಂದು ಬಿಣಗಾ ಕಾಸ್ಟಿಕ್ ಸೋಡಾ ಫ್ಯಾಕ್ಟರಿಯ ವಿಷಾನಿಲ ವಾತಾವರಣದಿಂದಾಗಿ ಕೆಡುತ್ತಲಿದೆ. ಯೋಗ್ಯ ಲಕ್ಷವಹಿಸಿ ಸರಿಯಾದ ರಸ್ತೆ ಹಾಗು ವಸತಿ ವ್ಯವಸ್ಥೆ ಮಾಡಿದಲ್ಲಿ ಇದನ್ನು ಉತ್ಕೃಷ್ಟ ಗಿರಿಧಾಮನ್ನಾಗಿಸಬಹುದು.

**ಮೋತಿಗುಡ್ಡ :** ೪೫೮ ಮೀಟರ ಎತ್ತರವಿರುವ ಮೋತಿಗುಡ್ಡವು ಅಂಕೋಲೆ ತಾಲೂಕಿನಲ್ಲಿದೆ. ಇಲ್ಲಿಯೂ ಹವೆತಂಪಾಗಿದ್ದು ನೀರಿದ್ದು ಶಾಲೆಯಿದೆ. ಇದರಂತೆ ಅಂಕೋಲೆ ಕಾರವಾರ ರಸ್ತೆಯಲ್ಲಿರುವ ಅವರ್ಸೆ ಬಳಿ **ಕೆಳಗಿನ ಬೆಣ** ಮತ್ತು **ಮೇಲಿನ ಬೆಣ** ಎಂಬ ಎತ್ತರದ ನೆಲೆಗಳಿದ್ದು ಕಡಿದಾದ ದಾರಿಯಲ್ಲಿ ಬೆಟ್ಟವೇರಿದಾಗ ಶಿಖರದಮೇಲೆ ಸಮತಟ್ಟಾದ ಪ್ರದೇಶವಿದ್ದು ದೇವಾಲಯ, ಬಾವಿ, ಹಾಗು ಒಕ್ಕಲ ಕೇರಿಯಿದೆ. ಚಿಕ್ಕದಾದರೂ ಚೊಕ್ಕ ಗಿರಿನಿವಾಸವಿದು. ಅಂತೆಯೇ ಅಂಕೋಲೆಯ ಬಳಿ ಹುಬ್ಬಳ್ಳಿ ರಸ್ತೆಯ ಪಕ್ಕದಲ್ಲಿ **ತುಳಸಿಗುಡ್ಡವು** ಸಹ ಗಿರಿಧಾಮವಾಗಿಸಲು ತಕ್ಕಸ್ಥಳ.

**ಮೇದಿನಿ ಕೋಟೆ :** ಕುಮಟೆ ತಾಲೂಕಿನ ಸಾಂತಗಲ್ಲಿನ ಆಗ್ನೇಯಕ್ಕೆ ೨೦ ಕಿ.ಮೀ. ದೂರದಲ್ಲಿರುವ ಈ ಗಿರಿ-ನಿವಾಸದ ಸುತ್ತಲೂ ಸಿಗುವ ಸಸ್ಯರಾಶಿಯಿಂದ ಗಿಡಮೂಲಿಕೆಗಳಿಂದ ಹಿಂದೆ ಬಹು ಪ್ರಸಿದ್ಧಿ ಪಡೆದಿತ್ತು. ಔಷಧಿಯ ಪರಿಶೋಧನಾ ಕೇಂದ್ರವನ್ನಾಗಿಸಬಹುದು. ಹಾಲಕ್ಕಿ ಒಕ್ಕಲು ಪರ್ವತದ ತಳಭಾಗದಲ್ಲಿ ಮನೆ ಮಾಡಿಕೊಂಡಿರುವರು. ಹಲವಾರು ಶಿಲಾಶಾಸನಗಳು ಗತಕಾಲದ ಕುರುಹುಗಳು ಅರಣ್ಯದಲ್ಲಿ ಹಾಳುಸುರಿಯುತ್ತಲಿವೆ.

**ಕಳ್ಳಿಗುಡ್ಡ : ಮಾಥೇರಾನಿನ** ಎತ್ತರಕ್ಕೆ ಹೋಲುವ ಈ ವಿರಾಮ ಸ್ಥಳವು ಕುಮಟೆಯಿಂದ ೧೭ ಕಿ.ಮೀ. ದೂರದಲ್ಲಿದ್ದು ೭೬೦ ಮೀಟರ ಎತ್ತರದಲ್ಲಿದ್ದು, ಹಿಂದೆ ಹೊನ್ನಾವರದಲ್ಲಿರುತ್ತಿದ್ದ ಆಂಗ್ಲ ಅಧಿಕಾರಿಗಳು ಬೇಸಿಗೆಯಲ್ಲಿ ಈ ಗಿರಿನಿವಾಸಕ್ಕೆ ಹೋಗಿರುತ್ತಿದ್ದರು. ಇಂದು ರಸ್ತೆ ಕೂಡ ಹಾಳಾಗಿದೆ.

**ದರ್ಶನಗುಡ್ಡೆ :** ಜಿಲ್ಲೆಯ ಉತ್ತರ ಭಾಗದಲ್ಲಿ ಸುಪಾ ತಾಲೂಕಿನಲ್ಲಿ ತಿನಾಯಿ (ತಿನ್ನೆ) ಘಟ್ಟದ ಉತ್ತರದಲ್ಲಿ ೭ ಕಿ.ಮೀ. ದೂರದಲ್ಲಿ ಈ ಪರ್ವತಪ್ರದೇಶವಿದೆ. ಈ ಜಿಲ್ಲೆಯಲ್ಲಿಯೇ ಅತಿ ಎತ್ತರದ ಈ ಗಿರಿ ಪ್ರದೇಶ ೯೧೫ ಮೀಟರ ಎತ್ತರವಾಗಿದ್ದು ಕಡಿದಾದ ಕಲ್ಲು ಬಂಡೆಗಳಿಂದ ಕೂಡಿದ್ದು ಪರ್ವತಾರೋಹಣ ಪ್ರಿಯರಿಗೆ ಸೂಕ್ತವಾದ ನೆಲೆಯಾಗಿದೆ. ಪರ್ವತಾರೋಹಣ ತರಬೇತಿ ಕೇಂದ್ರವನ್ನು ಇಲ್ಲಿ ಸ್ಥಾಪಿಸಬಹುದು.

**ನಿಶಾನೆಗುಡ್ಡ :** ಶಿರಸಿಯ ಹೆಗ್ಗರಣಿ ರಸ್ತೆಯಲ್ಲಿ ಬಾಳೆಗದ್ದೆಯ ಬಳಿಯಲ್ಲಿಯಲ್ಲಾಪುರ ತಾಲೂಕಿನ ಈ ಎತ್ತರ ಗುಡ್ಡದ ಎರಡು ಹಿರಿದಾದ ಬಂಡೆಗಳ ಮಧ್ಯದಿಂದ ದೂರದ ಸಮುದ್ರವನ್ನು ಕಾಣಬಹುದಂತೆ. ವಿಹಾರಕ್ಕೆ ಯೋಗ್ಯ ಸ್ಥಳ.

**ಕ್ಯಾಸಲ್‌ರಾಕ್ :** ಗೋವೆಯ ಸರಿಹದ್ದಿನ ಮಾರ್ಗದಲ್ಲಿ ಲೋಂಡಾದಿಂದ ಗೋವಾಕ್ಕೆ ಹೋಗುವಾಗ ರೇಲ್ವೆನಿಲ್ದಾಣವುಳ್ಳ ಊರು ಕಲ್ಲು ಬಂಡೆಗಳಿಂದ ಬೃಹದಾಕಾರದ ಕೋಟೆಯಂತೆ ಕಂಗೊಳಿಸುತ್ತದೆ. ಸುಮಾರು ೫೭೫ ಮೀಟರ ಎತ್ತರದಲ್ಲಿದ್ದ ಈ ಊರಿನ ಹವೆ ತಂಪಾಗಿ ಆರೋಗ್ಯಕರವಾಗಿದೆ. ಬೇಸಿಗೆಯ ವಿರಾಮ ಸ್ಥಳವಾಗಿಸಲು ಯೋಗ್ಯ ಸ್ಥಳವಾಗಿದ್ದು ಹತ್ತಿರವೆ ಗೋವೆಗೆ ಹೋಗುವ ದಾರಿಯಲ್ಲಿ **ದೂದಸಾಗರ** ಜಲಪಾತ ರಮ್ಯವಾಗಿದೆ.

**ಶಿರ್ವೆ :** ಕಾರವಾರದ ಈಶಾನ್ಯಕ್ಕೆ ೧೬ ಕಿ.ಮೀ. ದೂರಕ್ಕೆ ಶಿರ್ವೆಹಳ್ಳಿ ಎಂಬ ಹಳ್ಳಿಯು ಉತ್ತಮ ಗಿರಿಧಾಮವಾಗಿದೆ. ಗುಡ್ಡದ ಮೇಲೆ ಬಸವನಮಂದಿರ ಹಾಗು ಬಾವಿಯಿದ್ದು ಪ್ರತಿವರ್ಷ ಇಲ್ಲಿ ಜಾತ್ರೆ ನಡೆಯುತ್ತದೆ. ಜಾತ್ರೆಗೆ ಹೋಗುವವರು ಏಣಿಯ ಇಲ್ಲವೆ ಹಗ್ಗದ ಸಹಾಯದಿಂದ ಮೇಲೇರಿ ಹೋಗಬೇಕಾಗುತ್ತದೆ. ಇಲ್ಲಿ ನೆಲೆಸಿರುವ ಹಾಲಕ್ಕಿ ಒಕ್ಕಲಿಗರು ಅನೇಕ ದಂತೆ ಕತೆಗಳನ್ನು ಹೇಳುತ್ತಾರೆ.

**ಬೆಡಸಗಾಂವ ಗುಡ್ಡ :** ಮುಂಡಗೋಡ ತಾಲೂಕಿನಲ್ಲಿ ೭೬೫ ಮೀಟರ ಎತ್ತರ ಪ್ರದೇಶವಾದ ಬೆಡಸಗಾಂವ ಗುಡ್ಡದ ತುದಿಯಲ್ಲಿ ವಿಶಾಲವಾದ ಸಮತಟ್ಟಾದ ನೆಲ ಹರಡಿಕೊಂಡಿದ್ದು ವಿರಾಮಧಾಮವಾಗಿಸಲು ಸೂಕ್ತಸ್ಥಳವಾಗಿದೆ.

ಈ ಮೇಲೆ ಹೇಳಿದ ಸ್ಥಳಗಳಲ್ಲದೆ ಶಿರಸಿ ತಾಲೂಕಿನಲ್ಲಿ **ಕಳಾಸಗುಡ್ಡ, ಮೆಣಸಿಗುಡ್ಡ,** ಸಿದ್ದಾಪುರ ತಾಲೂಕಿನಲ್ಲಿ **ರಾಕ್ಷಸಗುಡ್ಡ, ಹಕಲಿಗುಡ್ಡ, ಮಾವಿನಗುಡ್ಡ,** ಹಾಗು ಇನ್ನಿತರ ತಾಲೂಕುಗಳಲ್ಲಿ ಇನ್ನೂ ಕೆಲವು ಎತ್ತರದ ಪ್ರದೇಶದಲ್ಲಿ ಗಿರಿಧಾಮಗಳನ್ನು ನಿರ್ಮಿಸಬಹುದು.

## ೪. ಪರಮ ಪಾವನ ಕ್ಷೇತ್ರಗಳು

ಉತ್ತರಕನ್ನಡದಲ್ಲಿ ಪ್ರಸಿದ್ಧಿಪಡೆದು ಧಾರ್ಮಿಕ ಕ್ಷೇತ್ರಗಳು ಕೆಲವಿದ್ದು ಅವು ನೈಸರ್ಗಿಕ, ಪೌರಾಣಿಕ, ಧಾರ್ಮಿಕ, ಸಾಂಸ್ಕೃತಿಕ ಕಲಾ ದೃಷ್ಟಿಯಿಂದ ತುಂಬಾ ಹಿರಿಮೆಯುಳ್ಳವಾಗಿದೆ.

**ಗೋಕರ್ಣ :** ಭಾರತದ ತುಂಬೆಲ್ಲ ಪುಣ್ಯಕ್ಷೇತ್ರವೆಂದು ಪ್ರಸಿದ್ಧಿಪಡೆದಿರುವ ಗೋಕರ್ಣಕ್ಕೆ ಇಂದು ದಿನಂಪ್ರತಿ ಸಾವಿರ ಸಾವಿರ ಸಂಖ್ಯೆಯಲ್ಲಿ ಯಾತ್ರಿಕರು ಬಂದು ಹೋಗುತ್ತಿದ್ದಾರೆ. ಗಂಗಾವಳಿ ಮತ್ತು ಅಘನಾಶಿನಿ ನದಿಮುಖಗಳ ನಡುವಿನ ಗೋಕರ್ಣ-ಮಂಡಲ ಪ್ರಕೃತಿರಮ್ಯ ನೆಲೆಯಾಗಿದೆ. ಇಲ್ಲಿಯ ಸಮುದ್ರದಂಡೆ, ಸನಿಹದಲ್ಲಿರುವ ಶತಶೃಂಗ ಪರ್ವತದ ಸಾಲುಗಳು ಊರಿನ ಸೌಂದರ್ಯವನ್ನು ಹೆಚ್ಚಿಸಿವೆ. ರಾವಣೇಶ್ವರನಿಂದ ಸ್ಥಾಪಿಸಲ್ಪಟ್ಟಿದೆಯೆಂಬ ಐತಿಹ್ಯವುಳ್ಳ ಮಹಾಬಲೇಶ್ವರ ಲಿಂಗವು ಶಿವನ ಆತ್ಮಲಿಂಗವೆಂದು ಖ್ಯಾತಿ ಪಡೆದಿದೆ. ಇಲ್ಲಿ ಗುಡಿಗಳು ತೀರ್ಥಗಳು ನೂರಾರು. ಇಲ್ಲಿಯ ಶಿಲೆಯಲ್ಲ ಲಿಂಗ, ಜಲವೆಲ್ಲ ತೀರ್ಥ. ಸಾಲಿಗ್ರಾಮ ಪೀಠದ ಮಧ್ಯದಲ್ಲಿರುವ ಕೇವಲ ಅಂಗುಷ್ಠಗಾತ್ರದ ಆತ್ಮಲಿಂಗದ ದರ್ಶನ ಆ ಸ್ಪರ್ಶನದಿಂದ ಭಕ್ತಜನಕೋಟಿ ಪುನೀತವಾಗುವದು, ಗಣಪತಿ, ವೆಂಕಟರಮಣ, ತಾಮ್ರಗೌರಿ, ಭದ್ರಕಾಳಿ, ಆದಿಗೋಕರ್ಣ, ಬಟ್ಟೆ ವಿನಾಯಕ, ಕೇತಕಿ ವಿನಾಯಕ, ಸುಂದರ ಗಣಪತಿ, ಪರಶುರಾಮ ಗೋಪಾಲಕೃಷ್ಣ, ಕಲಕಲೇಶ್ವರ, ಸುಬ್ರಹ್ಮಣ್ಯ ಗುಡಿಗಳು ಹಾಗು ಪರ್ತಗಾಳಿಮಠ, ಬಂಡೀಕೇರಿಮಠ, ಕೈವಲ್ಯಮಠ, ದಾಸಮಠ ಕಾಮೇಶ್ವರಮಠ, ವೀರಶೈವ ಮಠಗಳು ವಿಶಾಲವಾಗಿದ್ದು ನೋಡತಕ್ಕವುಗಳಾಗಿವೆ. ಊರ ಮಧ್ಯದಲ್ಲಿ ಕೋಟಿತೀರ್ಥವೆಂಬ ಸುಂದರವಾದ ವಿಸ್ತೀರ್ಣವಾದ ಪುಷ್ಕರಣಿಯಿದ್ದು ಊರ ಸುತ್ತಲೆಲ್ಲ ರಾಮತೀರ್ಥ, ಜಟಾಯುತೀರ್ಥ, ಅಗಸ್ತ್ಯ, ಮಾಲಿನಿ, ಸುಮಾಲಿನಿ, ಸೂರ್ಯ ಚಂದ್ರಾದಿ ಮೊದಲ್ಗೊಂಡು ಅನೇಕ ತೀರ್ಥಗಳು ಗೋಗರ್ಭ, ಉಮಾಮಹೇಶ್ವರ, ಅಕ್ಕತಂಗಿಯರ ಕರೆ, ಅಶೋಕೆ ಮೊದಲಾದ ನೆಲೆಗಳು ಪ್ರೇಕ್ಷಣೀಯವಾಗಿವೆ. ಗೋಕರ್ಣವನ್ನು ಕಂಡು

ನಲಿಯಬೇಕಾದರೆ ಕಡಲತೀರದಲ್ಲಿ ಶತಶೃಂಗ ಪರ್ವತದ ಅಕ್ಕ ಪಕ್ಕದಲ್ಲಿರುವ ಪ್ರದೇಶಗಳಿಗೆ ಹೋಗಿ ನೋಡಿಬರಬೇಕು. ಇಲ್ಲಿಯ ಕಡಲದಂಡೆ ಆಕರ್ಷಕ. ಕುಡ್ಲೆ ಬೀಚ ಹಾಗು ಓಂ ಬೀಚ ತುಂಬಾ ಸೊಗಸಾಗಿದ್ದು ಸಾವಿರಾರು ವಿದೇಶಿಯರು ಸದಾ ಇಲ್ಲಿ ಬಂದು ನೆಲೆಸಿರುತ್ತಾರೆ.

ಗೋಕರ್ಣದ ಬಳಿಯಿರುವ ತದಡಿ ಮತ್ಸ್ಯಬಂದರ, ಸಾಣಿಕಟ್ಟೆಯ ಉಪ್ಪಿನ ಆಗರಗಳು ನೋಡತಕ್ಕಂಥವುಗಳಾಗಿವೆ. ಗೋಕರ್ಣವನ್ನು ಪ್ರವೇಶಿಸುವಾಗ ಸಿಗುವ ಹಳ್ಳಿ ತೊರ್ಕೆಯು ಪೂರ್ವಕಾಲದಲ್ಲಿ ತಗರಪುರವೆಂದು ಪ್ರಸಿದ್ಧಿ ಪಡೆದಿದ್ದು ಶ್ರೀ ಹರ್ಷನು ಬರೆದ "ನಾಗಾನಂದ" ನಾಟಕದ ಕತೆಯು ನಡೆದ ಜೀಮೂತವಾಹನನ ನಾಡಾಗಿದೆ. ಇಲ್ಲಿಯ ಪ್ರಮುಖ ದೇವರಾದ ಶ್ರೀ ಕೆಂಗಳಾಪರಮೇಶ್ವರಿ ದೇವಾಲಯವು ತುಂಬಾ ಪ್ರಶಾಂತವೂ ಸುಂದರವೂ ಆಗಿರುವದಲ್ಲದೆ ಕಾವಿಕಲೆಯ ಶ್ರೇಷ್ಠ ಚಿತ್ರಣ ವಿನ್ಯಾಸಗಳನ್ನು ದೇವಾಲಯದ ಗೋಡೆಯ ಮೇಲೆ ಕಾಣಬಹುದು.

ಗೋಕರ್ಣದ ಕುರಿತು ಸ್ಕಂದಪುರಾಣ, ರಾಮಾಯಣ ಮಹಾಭಾರತಾದಿ ಗ್ರಂಥಗಳಲ್ಲಿ ಕಾಳಿದಾಸ ಪಂಪಾದಿಗಳ ಕಾವ್ಯಗಳಲ್ಲಿ ಉಲ್ಲೇಖವಿದ್ದು ಬಹು ಪ್ರಸಿದ್ಧ ಕ್ಷೇತ್ರವಾಗಿದೆ. ಮಹಾಶಿವರಾತ್ರಿ ಜಾತ್ರೆಯು ನಡೆದಾಗ ಎಳೆಯಲ್ಪಡುವ ರಥವು ದೊಡ್ಡದಾಗಿದ್ದು ಕಲಾತ್ಮಕ ಚಿತ್ರಗಳಿಂದಲಂಕೃತವಾಗಿದೆ.

**ಯಾಣ :** ಪ್ರಪಂಚದ ಅದ್ಭುತ ತಾಣ ಯಾಣವೆಂದರೆ ಅತಿಶಯೋಕ್ತಿಯೇನಲ್ಲ. "ಹಣವಿದ್ದರೆ ಗೋಕರ್ಣ, ತ್ರಾಣವಿದ್ದರೆ ಯಾಣ ಇಲ್ಲವೇ ರೊಕ್ಕಿದ್ದರೇ ಗೋಕರ್ಣ ಸೊಕ್ಕಿದ್ದರೆ ಯಾಣ" ಎಂಬ ಮಾತು ಜಿಲ್ಲೆಯಲ್ಲಿ ರೂಢಿಯಲ್ಲಿದೆ. ಏಕೆಂದರೆ ಯಾಣಕ್ಕೆ ಯಾತ್ರೆ ಕೈಕೊಳ್ಳುವದು ಹಿಂದೆ ಅಷ್ಟೊಂದು ಸಾಹಸದ ಮಾತೇ ಆಗಿತ್ತು. ಇಂದು ಯಾಣದ ಹತ್ತಿರದವರೆಗೂ ಬಸ್ಸಿನ ರಸ್ತೆಯಾಗಿದೆ. ಕೇವಲ ಒಂದು ಕಿಲೋಮೀಟರ ದೂರವನ್ನಷ್ಟೇ ನಡೆಯಬೇಕಾಗುವದು. ಕುಮಟೆಯಿಂದ ಹರಿಟೆಯ ಬಳಿಯ ಮಾರ್ಗದಿಂದ ಅಂಕೋಲೆಯ ಬದಿಯಿಂದ ಅಚವೆ ಮಾರ್ಗವಾಗಿ ಶಿರಸಿಯಿಂದ ಹೆಗಡೆಕಟ್ಟೆ ಮಾರ್ಗವಾಗಿ ಕಾಡಿನಲ್ಲಿ ಹಾದು ಯಾಣವನ್ನು ತಲುಪಬೇಕು. ವಡ್ಡಿ, ಮತ್ತಿ, ದೇವಿಮನೆ ಘಟ್ಟಗಳು ಸುತ್ತುವರಿಯಲ್ಪಟ್ಟದ್ದರಿಂದ ಯಾವ ದಾರಿಯಲ್ಲಿ ಬಂದರೂ ದುರ್ಗಮ ಬೆಟ್ಟದ ದಾರಿ ತಪ್ಪಿದ್ದಲ್ಲ. ಪ್ರವಾಸದ ಕಾಲದಲ್ಲಿ ಎತ್ತರ ಗಿಡಗಳ ದಟ್ಟ ವಿಸ್ತಾರ ಕಾಡು ತನುಮನದ ಆಯಾಸವನ್ನೆಲ್ಲ ಮರೆಸುತ್ತದೆ.

ಯಾಣದ ಶಿಖರ (ದೇವಾಲಯ) ವೆಂದು ಕರೆಯಲ್ಪಡುವ ಹಿರಿಬಂಡೆ ೧೨೦ ಮೀಟರ ಎತ್ತರವಾದ ಸುಮಾರು ಅಷ್ಟೇ ಅಗಲವಾದ ನೆಲಮುಗಿಲನ್ನು ಜೋಡಿಸುವ ಕರೆ ಪರದೆಯಂತೆ ಬೃಹದಾಕಾರದ ಭಯಂಕರವಾದ ಶಿಲಾ ರೂಪವಾಗಿದೆ. ಇದನ್ನು ಮೊದಲೊಮ್ಮೆ ಕಂಡಾಗ ಎಂಥವನಾದರು ನಿಬ್ಬೆರಗಾಗಿ ಪ್ರಕೃತಿ ಮಹಾಕೃತಿಗೆ ತಲೆ ಮಣಿಯಲೇ ಬೇಕು. ಈ ಬಂಡೆಯ ಮಧ್ಯದಲ್ಲಿ ಸೀಳು ಇದ್ದು ನೆತ್ತಿಯ ಮೇಲೆ ಜಲ ಸಂಚಯವಿದೆ! ಈ ಭೀಮ ಬಂಡೆಯ ಸೀಳಿನ ಗುಹೆಯಲ್ಲಿ ತಾನಾಗಿ ಮೂಡಿನಿಂತ ಭೈರವೇಶ್ವಲಿಂಗ ಎರಡು ಮೀಟರ ಎತ್ತರವಾಗಿದ್ದು ಈ ಲಿಂಗದ ಮೇಲೆ ಸದಾ ಅಂಗುಲ ಗಾತ್ರದ ನೀರು ಮೇಲಿನಿಂದ ಒಸರುತ್ತಿರುತ್ತದೆ! ಸ್ಕಂದಪುರಾಣದಲ್ಲಿ ಯಾಣದ ಕತೆ ನಿರೂಪಿತವಾಗಿದೆ. ಭಸ್ಮಾಸುರನು ಈಶ್ವರನಿಂದ ಉರಿಹಸ್ತದ ವರ ಪಡೆದು ಕೊನೆಗೆ ಈಶ್ವರನನ್ನೇ ಸುಡುವದಾಗಿ ಅಟ್ಟಿಸಿಕೊಂಡು ನಡೆದಾಗ ಭೈರವೇಶ್ವರನ ರಕ್ಷಣೆಗಾಗಿ ಮಹಾವಿಷ್ಣುವು ಮೋಹಿನಿಯಾಗಿ ಬಂದು ಭಸ್ಮಾಸುರನನ್ನು ಒಲಿಸಿ ಕುಣಿಸಿ ಅವನ ಹಸ್ತವನ್ನೆ ಅವನ ತಲೆಮೇಲಿರಿಸುವಂತೆ ಮಾಡಿ ಭಸ್ಮಾಸುರನನ್ನು ಭಸ್ಮ ಮಾಡಿದ ಸ್ಥಳವಿದೆಂದು ಪ್ರತೀತಿ. ಸುತ್ತಲಿನ ಅರಣ್ಯ ಪ್ರದೇಶವೆಲ್ಲ ಕಪ್ಪಾದ ಭಸ್ಮಮಯ ಮಣ್ಣಿನಿಂದ ತುಂಬಿರುವದರಿಂದ ಈ ಹೇಳಿಕೆಗೊಂದು ಪುಷ್ಠಿಯೊದಗಿದೆ. ಯಾಣದ ಬಂಡೆಯ ಮೇಲೆಲ್ಲ ಸಾವಿರಾರು ಹಿರಿಜೇನು ಹುಟ್ಟುಗಳು ಕಂಗೊಳಿಸುತ್ತವೆ. ಈ ಹೆಬ್ಬಂಡೆಯಿಂದ ಇಳಿದು ಬಂದ ಪ್ರವಾಹವೆ ಮುಂದೆ ಚಂಡಿಕಾ ನದಿಯಾಗಿ ಅಘನಾಶಿನಿ ನದಿಯನ್ನು ಸೇರುತ್ತದೆ. ಈ ಬಂಡೆಯಿದ್ದ ಬೆಟ್ಟದ ಕೆಳಗಡೆ ನದಿಯಲ್ಲಿ ಸ್ನಾನಮಾಡಿ ಮೇಲೇರಿ ಹೋಗುವಾಗ ಇನ್ನೊಂದು ಕಿರಿಗಾತ್ರದ "ಹೊಲತಿ ಶಿಖರ" (ಮೋಹಿನಿ ಶಿಖರ) ಕಂಗೊಳಿಸುತ್ತದೆ. ಇಂಥ ಹಲವಾರು ಮಹಾಮಹಾ ಬಂಡೆಗಳು ಯಾಣದ ಪರಿಸರದಲ್ಲಿವೆ. ಪ್ರಕೃತಿಯ ಭವ್ಯತೆಯ ದಿವ್ಯದರ್ಶನದಿಂದ ಪುನೀತನಾದ ಪ್ರವಾಸಿಗೆ ಪ್ರವಾಸದ ಪ್ರಯಾಸದ ಅರಿವಾಗುವದಿಲ್ಲ. ಪೂರ್ವಕಾಲದಲ್ಲಿ ಯಾಣದ ಪ್ರದೇಶ ಸಮೃದ್ಧ ಪ್ರದೇಶವಾಗಿದ್ದು

“ಯಾಣದ ಎಪ್ಪತ್ತು ಹಳ್ಳಿ” ತುಂಬಾ ಪ್ರಖ್ಯಾತವಾಗಿತ್ತು. ಶಿವರಾತ್ರಿಯ ದಿನ ಇಲ್ಲಿ ಪೂಜೆ ಸಲ್ಲಿಸಿ ದಂಡಿತೀರ್ಥದ ನೀರನ್ನು ತಂದು ಗೋಕರ್ಣದ ಮಹಾಬಲೇಶ್ವರನಿಗೆ ಅರ್ಪಿಸಿದರೆ ಮಹಾಪುಣ್ಯವಂತೆ. ಕೌಶಿಕ ರಾಮಾಯಣ ಬರೆದ ಬತ್ತಲೇಶ್ವರ ಕವಿ ಇಲ್ಲಿ ವಾಸಿಸಿದ್ದನಂತೆ. ಕುಮಟೆಯಿಂದ ಯಾಣಕ್ಕೆ ಬಸ್ಸಿನ ಸೌಕರ್ಯವಿದೆ.

**ಕರಿಕಾನಮ್ಮ :** ಹೊನ್ನಾವರ-ಕುಮಟೆಯ ನಡುವೆ ಅರೆಅಂಗಡಿ ಬಳಿ ಅತಿ ಎತ್ತರ ಗುಡ್ಡದ ಮೇಲೆ ಕರಿಕಾನಮ್ಮ ದೇವಾಲಯವನ್ನು ನಿರ್ಮಿಸಿದ್ದಾರೆ. ಕರಿಕಾನಮ್ಮನಗುಡ್ಡ ಎಂಬ ಹೆಸರಿನಿಂದ ಕರೆಯಲ್ಪಡುವ ಈ ನೆಲೆಯಲ್ಲಿ ನಿಂತು ದೂರ ಮತ್ತು ಕೆಳಗೆ ದೃಷ್ಟಿ ಹರಿಸಿದರೆ ಕಾಣುವ ನೋಟವನ್ನು ರಸಿಕರು ಎಂದೆಂದಿಗೂ ಮರೆಯಲಾರರು. ದೂರದಲ್ಲಿ ಸಂಜೆಯ ಸೂರ್ಯ ಸಮುದ್ರದಲ್ಲಿ ಮುಳುಗುವ ನೋಟ ನಯನ ಮನೋಹರ. ಸುತ್ತಲಿನ ದೃಶ್ಯ ಬಣ್ಣನೆಗೆ ನಿಲುಕದು. ದೇವತಾ ವಿಗ್ರಹವೆಂದು ಪೂಜಿಸಲ್ಪಡುವ ನೈಸರ್ಗಿಕ ಶಿಲಾಮೂರ್ತಿ ಬೃಹದಾಕಾರವಾಗಿದೆ. ಇಲ್ಲಿಂದ ಸ್ವಲ್ಪ ಮೇಲೆ ಅಡಿಕೆಯಷ್ಟೇ ಗಾತ್ರದ ನಿರಾವರಣ ಲಿಂಗದಮೇಲೆ ಸದಾಕಾಲ ನೀರು ಬೀಳುತ್ತಿರುತ್ತದೆ. ಇದಕ್ಕೆ ಒಂದಡಿಕೆ ಶಿವಲಿಂಗ ದೇವರೆಂದು ಕರೆಯುತ್ತಾರೆ.

**ಇಡುಗುಂಜಿ :** ಶರಾವತಿ ನದಿಯ ದಕ್ಷಿಣ ದಂಡೆಯಲ್ಲಿ ಹೊನ್ನಾವರದಿಂದ ೧೦ ಕಿ.ಮೀ. ದೂರದಲ್ಲಿ ಹವ್ಯಕರ ಆರಾಧ್ಯದೇವನಾದ ಗಣಪತಿಯ ವಿಗ್ರಹ ಅತ್ಯಂತ ಭವ್ಯವಾಗಿದ್ದು ಭಾವುಕರಲ್ಲಿ ಭಕ್ತಿಯ ಸೆಲೆಯನ್ನು ಚಿಮ್ಮಿಸುತ್ತದೆ. ಒಂದು ಕೈಯಲ್ಲಿ ಗಂಟೆ ಇನ್ನೊಂದು ಕೈಯಲ್ಲಿ ಮೋದಕವಿರುವ ವಿಗ್ರಹವು ೮೦ ಸೆಂಟಿಮೀಟರ ಎತ್ತರವಿದ್ದು ೩೫ ಸೆಂಟಿಮೀಟರ ಪೀಠದಲ್ಲಿ ನೆಲೆಸಿದೆ. ಸ್ಕಂದಪುರಾಣದಂತೆ ನಾರದನಿಂದ ಪ್ರತಿಸ್ಥಾಪಿಸಲ್ಪಟ್ಟ ಈ ಮಹಾಗಣಪತಿಯ ಪದತಳದಲ್ಲಿ ನವಿಲುಗರಿಯ ಕುಂಚಿಯನ್ನು ಇಟ್ಟು ಪೂಜಿಸಿದ್ದರಿಂದ ‘ಇಟ್ಟಕುಂಜಿ’ ಇಟಗುಂಜಿಯಾಯಿತೆಂದು ಹೇಳಿಕೆಯಿದೆ. ಇತ್ತೀಚೆಗೆ ಗುಡಿಯ ಜೀರ್ಣೋದ್ಧಾರ ನಡೆದಿದೆ. ಇಡಗುಂಜಿಯ ಸುತ್ತಲಿನ ಪ್ರದೇಶ ಪ್ರಕೃತಿ ರಮ್ಯತೆಯಿಂದೊಡಗೂಡಿದೆ.

**ಮುರ್ಡೇಶ್ವರ :** ಗೋಕರ್ಣದ ಆತ್ಮಲಿಂಗ ಸ್ಥಾಪನೆಯಾದಾಗಲೇ ರಾವಣನಿಂದಲೆ ಇನ್ನು ನಾಲ್ಕು ಲಿಂಗಗಳು ಈ ಜಿಲ್ಲೆಯಲ್ಲಿ ಸ್ಥಾಪಿಸಲ್ಪಟ್ಟವು ಎಂಬುದು ಪುರಾಣದ ಕತೆ. ಇನ್ನಿತರ ನಾಲ್ಕು ಕ್ಷೇತ್ರಗಳೆಂದರೆ ಮುರುಡೇಶ್ವರ, ಗುಣವಂತೇಶ್ವರ, ಧಾರೇಶ್ವರ ಮತ್ತು ಸಜ್ಜೇಶ್ವರ. ಮುರ್ಡೇಶ್ವರವು ಭಟಕಳದಿಂದ ೧೬ ಕಿ.ಮಿ. ದೂರದಲ್ಲಿ ಕಡಲದಂಡೆಯಲ್ಲಿದ್ದು ಪ್ರಾಚೀನಕಾಲದಿಂದಲೂ ಧಾರ್ಮಿಕತೆ ಹಾಗೂ ಐತಿಹಾಸಿಕತೆಗಳ ಪ್ರಸಿದ್ಧ ತಾಣವಾಗಿತ್ತು. ಅಂತೆಯೆ ಇಂದಿಗೂ ಅಲ್ಲ ಹಾಡುವಳ್ಳಿಯ ಸಾಳ್ವ ದೊರೆಗಳು ನಿರ್ಮಿಸಿದ ಬಸದಿ, ತೀರ್ಥಂಕರರ ಮೂರ್ತಿಗಳು, ಹಲವು ದೇವಾಲಯಗಳು, ಕೆರೆ, ವೀರರಮನೆ, ವೀರಗಲ್ಲುಗಳು, ಮರದಿಂದ ತಯಾರಿಸಿದ ೧೬ ಮಾಸತಿಯರ ಕುರುಹುಗಳು ಇವೆಲ್ಲಕ್ಕೂ ಕಿರೀಟವಿಟ್ಟಂತೆ ಸುಂದರ ನೆಲೆಯಲ್ಲಿ ಶೋಭಿಸುತ್ತಿರುವ ಮುರುಡೇಶ್ವರ ದೇವಾಲಯ ಹಾಗೂ ಹಳೆಯ ದೇವಾಲಯಗಳ ಅವಶೇಷಗಳನ್ನೆಲ್ಲ ಕಾಣಬಹುದು. ರಾಷ್ಟ್ರೀಯ ಹೆದ್ದಾರಿಯಿಂದ ಊರನ್ನು ಪ್ರವೇಶಿಸುವಾಗ ಮಹಾದ್ವಾರವು ಕಲಾತ್ಮಕವಾಗಿದ್ದು ದೇವಾಲಯದ ಬಳಿಸಾರಿದಂತೆ ಎರಡು ಆನೆಗಳು ಪ್ರವಾಸಿಕರನ್ನು ಸ್ವಾಗತಿಸುವವು. ಸಮುದ್ರದಲ್ಲಿ ಒಳಸೇರಿದ ಕಂದುಗಿರಿ ಎಂಬ ಗುಡ್ಡದ ಮೇಲೆ ಮುರುಡೇಶ್ವರನ ದೇವಾಲಯವನ್ನು ಹೊಸದಾಗಿ ದಾಕ್ಷಿಣಾತ್ಯ ಶಿಲ್ಪದಲ್ಲಿ ನಿರ್ಮಿಸಲಾಗಿದೆ. ಸುತ್ತಲೂ ವಿಸ್ತಾರವಾದ ಚಂದ್ರಶಾಲೆಯಿದ್ದು ಗಣಪತಿ, ಸುಬ್ರಹ್ಮಣ್ಯ, ಹನುಮಂತ, ಪಾರ್ವತಿಯರ ಪೀಠಗಳಿವೆ. ಮುರ್ಡೇಶ್ವರ ದೇವಾಲಯದ ಗೋಪುರ ಹಾಗು ಸುತ್ತಲಿನ ಕಟ್ಟಡಗಳ ಶಿಲ್ಪಗಳು ಉತ್ತಮ ಮಟ್ಟದ್ದಾಗಿದ್ದು ಆಕರ್ಷಕವಾಗಿದೆ. ಸುತ್ತಲಿನ ಸಮುದ್ರ ನಾಡಿನ ಪ್ರವಾಸಿಗಳನ್ನು ತನ್ನೆಡೆಗೆ ಸೆಳೆಯುತ್ತದೆ. ನೇತ್ರಾಣಿ ದ್ವೀಪ ಹತ್ತಿರವೆ ಇದೆ. ಇಲ್ಲಿಯ ಕಡಲ ಸಂಜೆಯ ಸೊಗಸನ್ನು ಅನುಭವಿಸಿಯೇ ತಿಳಿಯಬೇಕು. ಪ್ರವಾಸಿಗಳಿಗಾಗಿ ಸಮುದ್ರಮಧ್ಯದಲ್ಲಿ ಕಟ್ಟಲಾದ ನವೀನ ಉಪಹಾರ ಗೃಹ, ಗುಡ್ಡದ ಮೇಲಿರುವ ವಸತಿಗೃಹಗಳು, ರಮ್ಯವಾಗಿದೆ. ಪ್ರತಿನಿತ್ಯ ಉಚಿತ ಅನ್ನದಾನಸೇವೆ ದೇವಾಲಯ ನಡೆಸುತ್ತಿದೆ. ತಿರುಪತಿಯನ್ನು ಬಿಟ್ಟರೆ ಇನ್ನೆಲ್ಲೂ ಈ ವರೆಗೆ ಇಲ್ಲದ ೩೫ ಅಡಿ ಎತ್ತರದ ಚಿನ್ನದ ವರ್ಣದ ಭವ್ಯ ಧ್ವಜಸ್ಥಂಬ ಈ ಮಾದರಿಯದ್ದು ಕರ್ನಾಟಕದಲ್ಲಿಯೆ ಅತಿ ಎತ್ತರವಾಗಿದ್ದು ಮನಸೆಳೆಯುತ್ತದೆ. ಇಂದು ರಾಷ್ಟ್ರಖ್ಯಾತಿಯ ಸ್ಥಳವಾಗಿ ಪರಿಗಣಿಸಲ್ಪಟ್ಟ ಮುರ್ಡೇಶ್ವರದ ನಿಸರ್ಗದ ಹಾಗು ಕಲೆಯ ವೈಭವವನ್ನು ಕಂಡೇ ಆನಂದಿಸಬೇಕು.

**ಗುಣವಂತೆ :** ಹೊನ್ನಾವರದಿಂದ ೧೦ ಕಿ.ಮಿ. ದೂರದಲ್ಲಿ ಗುಣವಂತೇಶ್ವರ ಶಂಭಲಿಂಗೇಶ್ವರ ದೇವಾಲಯವು ಪ್ರಾಚೀನವಾಗಿದ್ದು, ವಿಶಾಲವೂ ಸುಂದರವೂ ಆಗಿದೆ. ಬೃಹದಾಕಾರದ ಲಿಂಗ ಭವ್ಯವಾಗಿದೆ. ದೇವಾಲಯದ ಚಂದ್ರಶಾಖೆಯಲ್ಲಿ ಹಲವು ಶಾಸನಗಳು ದೇವಸ್ಥಾನಕ್ಕೆ ದತ್ತಿಯಿತ್ತ ವಿವರಗಳನ್ನು ಹಾಗು ಇಲ್ಲಿ ಆಳಿದ ಒಡೆಯರ ಹೆಸರುಗಳನ್ನು ಹೇಳುತ್ತವೆ. ಅಮ್ಮನವರ (ನೆಲವಂಕಿ) ನರಸಿಂಹ, ಮುಗುಳು ಗಣಪತಿ ಪೀಠಗಳಿವೆ. ಗುಡಿಯ ಗೋಡೆಯಲ್ಲಿ ಕಾವಿಕಲೆಯ ಭೂಮಿತಿ ಆಕಾರದ ಹಾಗು ಪೌರಾಣಿಕ ಸನ್ನಿವೇಶಗಳ ಸುಂದರ ಚಿತ್ರಗಳನ್ನು ಕಾಣಬಹುದು. ಗುಡಿಯ ಎದುರಿಗೆ ಸ್ವಚ್ಛ ನೀರಿನ ಅಚ್ಚುಕಟ್ಟಾದ ಕೆರೆಯಿದೆ.

**ಧಾರೇಶ್ವರ :** ಕುಮಟೆಯಿಂದ ೫ ಕಿ.ಮಿ. ಧಾರೇಶ್ವರಲಿಂಗ ಚಾಲುಕ್ಯ ಶೈಲಿಯ ಪ್ರಾಚೀನ ದೇವಾಲಯದಲ್ಲಿದೆ. ಪ್ರಧಾನದ್ವಾರದ ಬಲಪಕ್ಕದಲ್ಲಿ ದುರ್ಗೆ ಗಣಪತಿಯರ ವಿಗ್ರಹಗಳು ಎಡಗಡೆಗೆ ಸುಂದರ ಗೋಪಾಲಕೃಷ್ಣ ಮೂರ್ತಿಯು ಶೋಭಿಸಿವೆ. ವಿಶಾಲವಾದ ಧಾರೇಶ್ವರದ ಸಮುದ್ರ ಬೇಲೆ ಶುದ್ಧವು ಮನೋಹರವೂ ಆಗಿದೆ.

**ಸಜ್ಜೇಶ್ವರ :** ಕಾರವಾರದಿಂದ ೧೦ ಕಿ.ಮೀ. ದೂರದಲ್ಲಿ ಶೇಜವಾಡ ಎಂಬಲ್ಲಿ ಸಜ್ಜೇಶ್ವರ ಲಿಂಗವು ರಾವಣನು ಆತ್ಮಲಿಂಗದ ಮೇಲಿನ ಸಂಪುಟವನ್ನು ತೆಗೆದು ಬೀಸಾಡಿದಾಗ ಇಲ್ಲಿ ಬಿದ್ದು ಲಿಂಗ ಸ್ಥಾಪನೆಯಾಯಿತಂತೆ. ಅದರಿಂದ ಈ ಲಿಂಗವನ್ನು ಸಂಪುಟೇಶ್ವರ ಲಿಂಗವೆಂದೂ ಕರೆಯುತ್ತಾರೆ.

**ಉಳವಿ :** ಜೋಯಿಡಾದಿಂದ ೩೬ ಕಿ.ಮೀ. ಮತ್ತು ಕಾರವಾರದಿಂದ ೯೦ ಕಿ.ಮೀ. ದೂರದಲ್ಲಿ ರಾಕ್ಷಸ ಘಟ್ಟದ ತುದಿಯಲ್ಲಿ ದಟ್ಟ ಅರಣ್ಯಾವೃತದ ನೆಲೆಯಲ್ಲಿರುವದು. ಲಿಂಗಾಯತರಿಗೆ ಅತಿ ಪವಿತ್ರವೆನಿಸಿದ ಐತಿಹಾಸಿಕ ಮಹತ್ವವುಳ್ಳ ಉಳವಿ ಕ್ಷೇತ್ರ. ಲಿಂಗಾಯತ ಧರ್ಮಸಂಸ್ಥಾಪಕ ಬಸವೇಶ್ವರರ ಸೋದರಳಿಯನಾದ ಚೆನ್ನಬಸವೇಶ್ವರನು ಬಿಜ್ಜಳನ ಮರಣದನಂತರ ಆದ ಕ್ರಾಂತಿಯಲ್ಲಿ ಅನೇಕ ಶರಣರೊಂದಿಗೆ ತಲೆಮರಿಸಿಕೊಂಡು ಯಲ್ಲಾಪುರ ಗಣೇಶಗುಡಿ ಮಾರ್ಗವಾಗಿ ಈ ಸ್ಥಳಕ್ಕೆ ಬಂದು ಬದುಕಿಕೊಂಡರಂತೆ. ಸೈನ್ಯದವರ ಕಣ್ಣಿಗೆ ಬೀಳದೆ "ಉಳಿದ್ವಿ" ಎಂದು ಉದ್ಗಾರವನ್ನು ಚೆನ್ನಬಸವಣ್ಣ ತೆಗೆದನಂತೆ. ಅಂತೆಯೇ ಈ ಊರಿಗೆ ಉಳಿವಿ ಎಂದು ಹೆಸರಾಯಿತಂತೆ.

ಉಳವಿಯ ದೇವಾಲಯವು ಚೆನ್ನಬಸವಣ್ಣನ ಗದ್ದುಗೆಯನ್ನು ಹೊಂದಿದ್ದು ಗರ್ಭಗೃಹದಲ್ಲಿ ಲಿಂಗದ ಎದುರಿಗೆ ನಂದಿ ಸ್ಥಾಪಿಸಲ್ಪಟ್ಟಿವೆ. ದೇವಾಲಯದ ಶಿಖರವು ಪ್ರಮುಖ ಶಿವಶರಣರ ಪ್ರತಿಮೆಗಳಿಂದ ಅಲಂಕೃತವಾಗಿದೆ. ಉಳವಿ ಬಾವಿ, ವೀರಭದ್ರಕೆರೆ, ಶಿವತೀರ್ಥ, ಬಸವೇಶ್ವರಮಂದಿರ, ರುದ್ರಮಂಟಪ, ಬಾಬುರಾಯನ ಕೋಟೆ, ವಿಭೂತಿ ಕಣಜ, ಮಾಮನಿ ಗವಿ, ಬುಡ್-ಬುಡ್ ಕೆರೆ, ಕೂ-ಬಸಪ್ಪ, ಹರಳಯ್ಯನ ಚಿಲುಮೆ, ಅಕ್ಕನಾಗಮ್ಮನ ಗವಿ, ರುದ್ರಾಕ್ಷಿ ಮಂಟಪ ಗವಿ, ಮಲಗಿದ ಸ್ತ್ರೀಯನ್ನು ಹೋಲುವ ಸಹಜ ನಿಸರ್ಗ ಬಂಡೆ, ಹೊಲೆಯ ರಾಜನ ಮನೆಯ ಅವಶೇಷ, ಸುತ್ತಲಿನ ನಿಸರ್ಗದಲ್ಲಿ ಹಲವು ಬೆಡಗುಗಳು ಉಳವಿಯ ಯಾತ್ರೆಯಲ್ಲಿ ಕಾಣಸಿಕ್ಕು ಮರೆಯಲಾಗದ ಕ್ಷೇತ್ರ ಉಳವಿಯಾಗಿದೆ. ಉಳವಿಯ ಚೆನ್ನ ಬಸವೇಶ್ವರ ಜಾತ್ರೆಯು ಮಾಘಪೂರ್ಣಿಮೆಯ ಸಮಯ ಎಂಟುದಿನ ನಡೆಯುವದು. ಭಕ್ತರು ಉಳವಿ-ಜಾತ್ರೆ ಮುಗಿಸಿ ಗೋಕರ್ಣಕ್ಕೆ ಶಿವರಾತ್ರಿಗೆ ಬಂದು ಹೋದರೆ ಮಹಾಪುಣ್ಯವೆಂದು ನಂಬಿರುವರು.

**ಬನವಾಸಿ :** ವೈಜಯಂತಿ, ಜಯಂತಿಪುರವೆಂದು ಕದಂಬರು ಕನಕಾವತಿ ಎಂದು ವಿಜಯನಗರದವರು ಹೆಸರಿಸಿದ ಬನವಾಸಿಯನ್ನು ಪಂಪ ಮಹಾಕವಿ ಅಜರಾಮರವಾಗಿ ಬಣ್ಣಿಸಿದ್ದಾನೆ. ಬನವಾಸಿ ನಾಡು ಸಂಸಾರ ಸಾರ ಸರ್ವಸ್ವದ ಫಲವಂತೆ! ಸ್ವರ್ಗದ ಬೀಡಂತೆ! ವಿಷ್ಣುವು ಮಧು-ಕೈಟಭರೆಂಬ ರಕ್ಕಸರನ್ನು ಕೊಂದು ಮಧುಸೂದನನಾಗಿ ಇಲ್ಲಿ ಶಿವನನ್ನು ಲಿಂಗದಲ್ಲಿ ಆಹ್ವಾನಿಸಿದ್ದರಿಂದ ಇಲ್ಲಿಯ ಪ್ರಮುಖ ದೇವರು ಮಧುಕೇಶ್ವರನಾಗಿರುವನೆಂದು ಬನವಾಸಿ ಮಹಾತ್ಮೆಯಲ್ಲಿ ಬಣ್ಣಿಸಲ್ಪಟ್ಟಿದೆ. ಕದಂಬ ಕುಲದ ಕೀರ್ತಿ ಕಳಸವಾದ ಮಧುಕೇಶ್ವರ ದೇವಾಲಯ ವಿಶಾಲವಾಗಿದ್ದು ಶಿಲ್ಪಕಲೆಯ ಆಗರವಾಗಿದೆ. ಗರ್ಭಮಂಟಪ, ಅಂತರಾಳ ಮಂಟಪ, ಘಂಟಾಮಂಟಪ, ಸಭಾಮಂಟಪ, ನೃತ್ಯ ಮಂಟಪ ಎಂಬ ಆರು ಮಂಟಪಗಳು ಗುಡಿಯಲ್ಲಿದ್ದು ಒಳಗಿನ ಕಂಬಗಳು ಗೋಡೆಗಳು ಸುತ್ತಲೂ ಇದ್ದ ವಿವಿಧ ಪೀಠಗಳ ಕೆತ್ತನೆಗಳು ಕಲಾತ್ಮಕವಾಗಿವೆ. ಮಧುಕೇಶ್ವರನ ಎಡಗಡೆಗೆ ಇದ್ದ ಪಾರ್ವತಿ ಗುಡಿ ಸುಂದರ ಕಲ್ಲಿನಕಂಬಗಳಿಂದ ಶೋಭಿಸಿದೆ. ಎದುರಿಗಿದ್ದ ನಂದಿ ವಿಗ್ರಹ ದೊಡ್ಡದಿದ್ದು ಅತಿ

ರಮಣೀಯವಾಗಿದೆ. ಮಧುಕೇಶ್ವರ ಲಿಂಗವು ಮಧುವಿನ (ಜೇನು ತುಪ್ಪದ) ಬಣ್ಣ ಹೊಂದಿದ್ದು ಕತ್ತಲೆಯಲ್ಲಿಯೂ ಹೊಳೆಯುತ್ತದೆ. ಇಲ್ಲಿನ ಏಕ ಶಿಲಾ ಕಲ್ಲಿನ ಮಂಚವು ಉತ್ಕೃಷ್ಟ ಕೃತಿಯೆಂದು ಕರ್ನಾಟಕದ ಆರ್ಕಿಯೊಲೊಜಿಕಲ್ ವರದಿಯಲ್ಲಿ ಬಣ್ಣಿಸಲಾಗಿದೆ. ಸ್ವಾದಿಯ ಅರಸನಾದ ರಘುನಾಥ ನಾಯಕನು ಕ್ರಿ.ಶ. ೧೬೨೮ ರಲ್ಲಿ ದೇವರ ವಸಂತೋತ್ಸವಕ್ಕಾಗಿ ಇದನ್ನು ಅರ್ಪಿಸಿದನೆಂದು ಶಾಸನದಲ್ಲಿ ಹೇಳಲಾಗಿದೆ. ಈ ಮಂಚದಲ್ಲಿ ಸ್ವರ್ಗ- ಭೂ- ಪಾತಾಳಗಳನ್ನು ರಚಿಸಲಾಗಿದೆ. ರೇಖೆ-ವಿನ್ಯಾಸ-ಸೂಕ್ಷ್ಮತೆ, ಭವ್ಯತೆಯಲ್ಲಿ ಈ ಮಂಚ ಅಮೋಘವಾಗಿದೆ. ಬನವಾಸಿಯ ಧ್ವಜ ಸ್ತಂಭ, ರಥ, ದೇವಾಲಯದ ಆವರಣದಲ್ಲಿದ್ದ ವಿವಿಧ ದೇವತೆಗಳ ಶಿಲ್ಪ, ಬಸವಣ್ಣನವರ ಕಾಲದ ಶಿವಶರಣರ ಪ್ರತಿಮೆಗಳು, ಗಣಪತಿ- ಸರಸ್ವತಿ ಮೊದಲಾದ ಮೂರ್ತಿಗಳು ಶಿಲ್ಪಕಲಾ ಪ್ರತಿಭೆಯ ಪ್ರತೀಕವಾಗಿವೆ. ವರದಾನದಿಯ ದಂಡೆಯಲ್ಲಿಯ ಬನವಾಸಿಯಲ್ಲಿ ತಿರುಮಲ, ಶಿವ, ಮಾರಿ, ಪ್ರಭುದೇವ, ಅಲ್ಲಮಪ್ರಭು, ಬಸವೇಶ್ವರ, ಜೈನ, ಬಯಲಬಸವ, ವೆಂಕಟರಮಣ, ಕದಂಬೇಶ್ವರ, ನೀಲಕಂಠ, ರಾಮೇಶ್ವರ ಆದಿ ಮಧುಕೇಶ್ವರ, ದುರ್ಗಾ, ಶಿತಿ ಕಾಂತೇಶ್ವರ ಮುಂತಾದ ದೇವಾಲಯಗಳಿದ್ದು ಕೋಟೆಯ ಅವಶೇಷ, ಶಿಲಾಶಾಸನಗಳು ಅಲ್ಲಲ್ಲಿ ಬಿದ್ದುಕೊಂಡಿವೆ. ಶಿರಸಿ ಬನವಾಸಿ ರಸ್ತೆಯಲ್ಲಿ ಗುಡ್ನಾಪುರ ಕೆರೆ ಐತಿಹಾಸಿಕವಾಗಿ ಪ್ರಸಿದ್ಧವಿದ್ದು ಕೆರೆಯ ಪಕ್ಕದಲ್ಲಿ ಕರಿಯಮ್ಮ, ಮರಿಯಮ್ಮ, ಬಂಗಾರೇಶ್ವರ ಮೊದಲಾದ ಗುಡಿಗಳನ್ನು ಹೊಂದಿದೆ. ಒಟ್ಟಿನಲ್ಲಿ ಬನವಾಸಿ ಪ್ರದೇಶವನ್ನು ಒಮ್ಮೆ ನೋಡಿದರೆ "ಆರಂಕುಶವಿಟ್ಟರೂ" ನೆನೆಯುತ್ತಲೆ ಇರುವಂಥ ನೆಲೆ ಎಂದು ನಿಶ್ಚಿತವಾಗಿ ಹೇಳಬಹುದು.

**ಮಂಜುಗುಣಿ :** ಶಿರಸಿಯಿಂದ ೨೮ ಕಿ.ಮೀ. ದೂರದಲ್ಲಿದ್ದ ಪೂರ್ವದಲ್ಲಿ ಅತಿ ಪ್ರಸಿದ್ಧ ಕ್ಷೇತ್ರ. ವಾದಿರಾಜಸ್ವಾಮಿಯವರ ಪ್ರಕಾರ ತಿರುಪತಿಯ ವೆಂಕಟರಮಣದೇವರು ಬೇಟೆಗೆಂದು ಮಂಜಗುಣಿಗೆ ಬಂದಿದ್ದನಂತೆ. ಇಲ್ಲಿಯ ದೇವರು ಬೇಟೆ ವೆಂಕಟರಮಣನಾಗಿದ್ದು ಎರಡು ಕೈಗಳಲ್ಲಿ ಬಿಲ್ಲುಬಾಣಗಳಿದ್ದು, ಇನ್ನೆರಡು ಕೈಗಳಲ್ಲಿ ಶಂಖಚಕ್ರಗಳಿದ್ದು, ಕಪ್ಪು ಶಿಲೆಯ ಸುಂದರ ರೂಪದವನಾಗಿದ್ದಾನೆ. ಘಟ್ಟದ ಮೇಲಿದ್ದ ಈ ಊರು ಚಳಿಗಾಲದಲ್ಲಿ ದಟ್ಟವಾದ ಮಂಜಿನಿಂದ ಮುಸುಕಿರುವ ಗುಣಿಪ್ರದೇಶದಲ್ಲಿರುವದರಿಂದ ಈ ಹೆಸರು ಬಂದಿದೆ. ಮಂಜಗುಣಿಯ ರಥದಷ್ಟು ಕಲಾತ್ಮಕ ಹಾಗು ದೊಡ್ಡದಾದ ರಥ ಇನ್ನೊಂದಿಲ್ಲ. ದೊಡ್ಡದಾದ ಕೆರೆ ಹಾಗು ಹಲವು ದೇವಾಲಯಗಳು ಇಲ್ಲಿವೆ. ಚೈತ್ರಮಾಸದಲ್ಲಿ ಇಲ್ಲಿ ಜಾತ್ರೆ ನಡೆಯುವದು.

**ಸ್ವಾದಿ :** ಸೋಂದೆ, ಸೊಂದನಗರ, ಸೊವದೆ, ಸುಧಾಪುರ ಮೊದಲಾದ ಹೆಸರಿನಿಂದ ಐತಿಹಾಸಿಕ ಧಾರ್ಮಿಕ ಸ್ಥಳವು ಶಿರಸಿಯಿಂದ ೧೯ ಕಿ.ಮೀ. ದೂರದಲ್ಲಿದ್ದು ಹಿಂದೆ ಹತ್ತರ ಕನ್ನಡ ಜಿಲ್ಲೆಯ ಬಹುಭಾಗವನ್ನು ಆಳಿದ ಸ್ವಾದಿರಾಜರ ರಾಜಧಾನಿಯಾಗಿದ್ದು ಇಲ್ಲಿ ಸ್ಮಾರ್ತ, ವೈಷ್ಣವ ಮತ್ತು ಜೈನ ಮಠಗಳು ಸ್ಥಾಪಿಸಲ್ಪಟ್ಟವು. ಕಾಶಿಯಿಂದ ತ್ರಿವಿಕ್ರಮ ಮೂರ್ತಿಯನ್ನು- ತಂದು – ತ್ರಿವಿಕ್ರಮದೇವಾಲಯವನ್ನು ರಚಿಸಲಾಗಿದ್ದು ಈ ದೇವಾಲಯಕ್ಕೆ ಸಾಕಷ್ಟು ದತ್ತಿ ನೀಡಿದ ಬಗ್ಗೆ ಶಾಸನವಿದೆ. ಅಕಳಂಕಮಠ, ವಾದಿರಾಜಮಠಗಳಿವೆ. ವಾದಿರಾಜಮಠದಲ್ಲಿ ವಾದಿರಾಜರ ಬೃಂದಾವನವಿದ್ದು ಮಠದ ಹಿಂದ ದವಲಗಂಗಾ ಎಂಬ ಕಲ್ಯಾಣಿಯಿದೆ. ಬೃಂದಾವನದ ಸುತ್ತಲು ಗೋಪಾಲಕೃಷ್ಣ ರುದ್ರ, ಮಾರುತಿಯರ ಸುಂದರ ಶಿಲ್ಪಕಲಾಕೃತಿಗಳಿವೆ. ಸೋಂದೆ ಪರಿಸರದಲ್ಲಿ ಶಂಕರನಾರಾಯಣ ದೇವಾಲಯ, ಗದ್ದಿಗೆಮಠ, ಹುಣಸೆಹೊಂಡದ ವೆಂಕಟರಮಣದೇವಾಲಯ ಮತ್ತು ಎತ್ತರದ ಧ್ವಜಸ್ಥಂಬ, ಜೀರ್ಣದೇವಾಲಯಗಳು, ಶಿಲ್ಪಕಲಾಕೃತಿಯ ಮರಡಿಗಳು ಕಾಡಿನಲ್ಲಿ ಕಂಗೊಳಿಸುತ್ತದೆ.

**ಸ್ವರ್ಣವಳ್ಳಿ :** ಹೊನ್ನಹಳ್ಳಿ ಎಂಬ ಕನ್ನಡ ಹೆಸರಿನ ಸಂಸ್ಕೃತೀಕರಣವಾಗಿದೆ. ಆದಿಶಂಕರರ ಇಚ್ಛೆಯಂತೆ ಶೃಂಗೇರಿಮಠದ ಶಾಖೆಯಾಗಿ ಇಲ್ಲಿ ಸ್ವರ್ಣವಳ್ಳಿ ಮಠವು ಭಾಸ್ಕರೇಂದ್ರ ಸರಸ್ವತಿಯವರಿಂದ ಸ್ಥಾಪಿಸಲ್ಪಟ್ಟಿದೆ. ಹಿಂದೆ ಇಲ್ಲಿಗೆ ಭೆಟ್ಟಿಯಿತ್ತ ಪ್ರವಾಸಿ ಬುಕಾನೆನ್‌ನು ಈ ಸ್ಥಳವನ್ನು "ಹೈಗಸ್ವಾಮಿಯ ಹೊನಾವಳ್ಳಿಮಠ್" ಎಂದು ಗುರುತಿಸಿದ್ದಾನೆ. ಮೊದಲು ಈ ಮಠವು ಗೋಕರ್ಣದಲ್ಲಿದ್ದು ಈ ಪೀಠದ ೨೯ನೇ ಸ್ವಾಮಿಯವರ ಕಾಲದಲ್ಲಿ ಸೋಂದೆ ಅರಸರ ಇಚ್ಛೆಯಂತೆ ಸಹಸ್ರಹಳ್ಳಿಗೆ ವರ್ಗಾಯಿಸಲ್ಪಟ್ಟು ಅಲ್ಲಿಂದ ಮತ್ತೆ ಸ್ವರ್ಣವಳ್ಳಿಗೆ ಸ್ಥಳಾಂತರಪಟ್ಟಿತು. ಮಠದಲ್ಲಿ ಚಂದ್ರಮೌಳೀಶ್ವರ, ರಾಜರಾಜೇಶ್ವರ ಮತ್ತು ಲಕ್ಷ್ಮೀನಾರಾಯಣರ ಪೀಠಗಳಿದ್ದು ವಿಜಯನಗರ ಶೈಲಿಯಲ್ಲಿ

ನಿರ್ಮಿಸಲ್ಪಟ್ಟಿವೆ. ಸ್ವರ್ಣವಳ್ಳಿಮಠ ಇಂದು ಸುವ್ಯವಸ್ಥಿತ ರೀತಿಯಿಂದ ನಡೆಸಲ್ಪಟ್ಟು ಧಾರ್ಮಿಕ ಮತ್ತು ಸಾಂಸ್ಕೃತಿ ಕಾರ್ಯಗಳ ಕೇಂದ್ರವಾಗಿದೆ.

**ಸಹಸ್ರಲಿಂಗ :** ಮೊದಲು ಸಹಸ್ರಹಳ್ಳಿ ಎಂದು ಕರೆಸಿಕೊಳ್ಳುತ್ತಿತ್ತು. ಶಾಲ್ಮಲಾನದಿಯಲ್ಲಿ ಅನೇಕ ಲಿಂಗಗಳನ್ನು ಕೊರೆಯಲಾಗಿದೆ. ಈ ಲಿಂಗಗಳು ನದಿಯ ನಡುವೆಯಿದ್ದ ಕಲ್ಲುಗಳಲ್ಲಿ ಕೆತ್ತಲ್ಪಟ್ಟಿದ್ದು ಬಹಳ ವರುಷಗಳಲ್ಲಿ ಭಕ್ತರಿಂದ ರಚಿಸಲ್ಪಟ್ಟವೆಂದು ಭಾಸವಾಗುತ್ತದೆ. ಲಿಂಗದ ಎದುರಿಗೆ ಕೆಲವು ಬಸವಗಳು ಹಾಗು ಕೆಲವು ಶಿಲಾಶಾಸನಗಳು ಇವೆ. ದೊಡ್ಡಲಿಂಗವಿದ್ದಲ್ಲಿ ಸುತ್ತ ಚಿಕ್ಕ ಲಿಂಗಗಳನ್ನು ಕೊರೆದಿದ್ದಾರೆ. ಈ ಸ್ಥಳದಲ್ಲೀಗ ಜನವಸತಿಯಿಲ್ಲ. ಶಿವರಾತ್ರಿಸಮಯ ಜಾತ್ರೆ ನೆರೆದಂತೆ ಜನಸೇರುತ್ತಾರೆ.

**ಶಿರಾಲಿ :** ಭಟಕಳದಿಂದ ೭ ಕಿ.ಮೀ. ದೂರ ವೆಂಕಟಾಪುರ ನದಿಯ ಉತ್ತರಕ್ಕೆ ಪ್ರಾಚೀನ ಹಿನ್ನೆಲೆಯುಳ್ಳ ಶಿರಾಲಿ ಮಠಗಳಿಂದ ದೇವಸ್ಥಾನಗಳಿಂದ ಪ್ರಸಿದ್ಧಿಪಡೆದಿದೆ. ಶಿಲಾಶಾಸನಗಳಲ್ಲಿ ಶ್ರೀಲಿ, ಶಿರಿಯಾಳಿ ಎಂದು ವರ್ಣಿತವಾಗಿದೆ. ಆದಿಶಂಕರರು ಇಲ್ಲಿಗೆ ಬಂದಿದ್ದು ಕಡುವಿನಕಟ್ಟೆ ಎಂಬಲ್ಲಿ ದುರ್ಗಾ ಪರಮೇಶ್ವರಿ ಮೂರ್ತಿಯನ್ನು ಸ್ಥಾಪಿಸಿದರೆಂದು ಮತ್ತು ಇಲ್ಲಿಯ ಪಂಚವಟಿ ಎಂಬ ಬೆಟ್ಟದಲ್ಲಿದ್ದ ಶಂಭುಲಿಂಗ ಪೀಠವನ್ನು ಸಂದರ್ಶಿಸಿದ್ದರೆಂದು ಹೇಳುತ್ತಾರೆ.

ಶಿರಾಲಿಯಲ್ಲಿ ಚಿತ್ರಾಪುರ ಸಾರಸ್ವತರ ಮುಖ್ಯ ಮಠವಿದ್ದು ಮಠದಲ್ಲಿ ಹಿಂದಿನ ಆರು ಗುರುಗಳ ಸಮಾಧಿಗಳಿವೆ. ಪರಿಜ್ಞಾನಾಶ್ರಮ ಸ್ವಾಮಿಯವರು ಇಲ್ಲಿ ಒಂದು ಅತ್ಯುತ್ತಮ ವಸ್ತುಸಂಗ್ರಹಾಲಯವನ್ನು ಸಂಯೋಜಿಸಿದ್ದು ಪ್ರಾಚ್ಯಮೂರ್ತಿಗಳು, ಅವಶೇಷಗಳು, ತಾಮ್ರಪಟ, ಶಾಸನ, ನಾಣ್ಯ ಹಾಗು ಮತ್ತಿತರ ಕೌತುಕಮಯ ವಸ್ತುಗಳನ್ನು ಇಡಲಾಗಿದ್ದು ಜ್ಞಾನ ಪ್ರಚೋದಕವಾಗಿವೆ. ಮಠದ ಸುತ್ತಲು ಗೋಪಾಲಕೃಷ್ಣ, ದತ್ತಾತ್ರೇಯ, ಶಾಂತಾದುರ್ಗಾ, ಕೇಶವನಾರಾಯಣ ದೇವಾಲಯಗಳಿವೆ. ಯಾತ್ರಿಕರಿಗೆ ಉಳಿದುಕೊಳ್ಳಲು ಸೌಕರ್ಯವನ್ನು ಕಲ್ಪಿಸಲಾಗಿದೆ. ಚೈತ್ರ ಹುಣ್ಣಿಮೆಗೆ ರಥೋತ್ಸವವನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ.

ಶಿರಾಲಿಯಲ್ಲಿ ಅನೇಕ ಗೌಡಸಾರಸ್ವತ ಕುಟುಂಬಗಳಿಗೆ ಕುಲದೇವರಾದ ಮಹಾಗಣಪತಿ ಮಹಾಮಾಯಾ ದೇವಾಲಯವು ೪೦೦ ವರ್ಷ ಪೂರ್ವದ್ದಿದ್ದು ೧೯೦೪ ರಲ್ಲಿ ನವೀಕರಿಸಲಾಗಿದೆ. ವಿಶಾಲವಾದ ಈ ದೇವಾಲಯದ ಗೋಡೆಯಮೇಲೆ ದಶಾವತಾರದ ವಸ್ತುವುಳ್ಳ ಅನೇಕ ಕಾವಿ ಚಿತ್ರಗಳು ಕಾಣಸಿಗುತ್ತವೆ. ಮಾರುತಿ ದೇವಾಲಯವೂ ಚೆನ್ನಾಗಿದ್ದು ಅನೇಕ ಪಳೆಯುಳಿಕೆಗಳನ್ನು ಒಂದು ಶಾಸನವನ್ನು ಹೊಂದಿದೆ. ವೆಂಕಟಾಪುರ ನದಿ ದಂಡೆಯಲ್ಲಿ ಮಹಾಸತಿ, ಕಡ್ಲೆ ಎಂಬಲ್ಲಿ ಶಿವಲಿಂಗೇಶ್ವರ, ಬೆಂಗ್ರೆಯಲ್ಲಿ ಹನುಮಂತದೇವಾಲಯಗಳಿವೆ.

**ಗುಂಡಬಾಳೆ :** ಹೊನ್ನಾವರದ ಪೂರ್ವಕ್ಕೆ ೧೩ ಕಿ.ಮೀ. ದೂರ ಗುಂಡಬಾಳೆ ಇಂದು ಇಲ್ಲಿಯ ಹನುಮಂತದೇವರಿಂದ ಬಹುಪ್ರಖ್ಯಾತವಾಗಿದೆ. ಹಿಂದೆ ಜೈನ ಅರಸರ ಕಾಲಕ್ಕೆ ಪ್ರಸಿದ್ಧ ವ್ಯಾಪಾರಿ ಕೇಂದ್ರ, ಸಾಂಸ್ಕೃತಿಕ ಕೇಂದ್ರ ಇದಾಗಿದ್ದು ಗುಂಡಿಬೈಲು, ಗುಂಡಬಳಿ ಎಂಬ ಹೆಸರು ಈ ಊರಿಗೆ ಇತ್ತು. ಇಲ್ಲಿ ಜೈನ ಬಸ್ತಿಗಳು, ದೇವಾಲಯಗಳು, ಮೆಣಸಿನಕಾಳಿನ ಬಾವಿಗಳು ಇದ್ದು ಗತವೈಭವವನ್ನು ಸಾರಿ ಹೇಳುತ್ತವೆ. ಈ ಊರಿನ ಮುಖ್ಯಪ್ರಾಣದೇವರಿಗೆ (ಹನುಮಂತಗೆ) ಯಕ್ಷಗಾನ ಆಟವೆಂದರೆ ಪಂಚಪ್ರಾಣ. ಆದ್ದರಿಂದ ಭಕ್ತರು ಯಕ್ಷಗಾನ ಆಟ ಆಡಿಸುವದಾಗಿ ಹರಕೆ ಹೊರುತ್ತಾರೆ. ವರ್ಷದಲ್ಲಿ ಏಳು ತಿಂಗಳಕಾಲ ದಿನ ನಿತ್ಯ ಬೆಳಗಿನ ತನಕ ಆಟ ನಡೆಯುತ್ತಲೇ ಇರುತ್ತದೆ. ಆದ್ದರಿಂದ ಈ ದೇವರನ್ನು ಆಟದ ದೇವರು ಎಂದೂ ಕರೆಯುತ್ತಾರೆ. ಎಂಟು ಹತ್ತು ವರುಷಗಳ ಪೂರ್ವದಲ್ಲಿಯೇ ಆಟದ ಹರಕೆ ಹೊರುವವರು ತಮ್ಮ ಹರಕೆಯ ದಿನವನ್ನು ಗೊತ್ತು ಪಡಿಸಿಕೊಳ್ಳಬೇಕಾಗುತ್ತದೆ. ಯಕ್ಷಗಾನ ಮೇಳವೊಂದು ಇಲ್ಲಿ ಸ್ಥಿರವಾಗಿ ನೆಲೆಗೊಂಡಿರುವದರಿಂದ ಇಲ್ಲೊಂದು ಯಕ್ಷಗಾನ ಶಿಕ್ಷಣದ ಕಾಲೇಜನ್ನು ನಡೆಸಬಹುದು. ಪ್ರಪಂಚದಲ್ಲಿ ನಿತ್ಯ ಬೆಳತನಕ ಯಕ್ಷಗಾನ ಆಟ ನಡೆವ ಸ್ಥಳ ಇನ್ನೊಂದಿಲ್ಲ.

**ಅವರ್ಸೆ :** ಅಂಕೋಲೆಯ ಉತ್ತರಕ್ಕೆ ೧೦ ಕಿ.ಮೀ. ಅಂತರದಲ್ಲಿ ಧಾರ್ಮಿಕ ಮಹತ್ವ ಪಡೆದ ಚಿಕ್ಕ ಊರಿನಲ್ಲಿ ಕಾತ್ಯಾಯಿನಿ ದೇವಿಯ ದೊಡ್ಡ ಮಂದಿರವು ಸುವ್ಯವಸ್ಥಿತವಾಗಿದೆ. ಈ ದೇವಾಲಯದ ಚಾವಣಿಯನ್ನು ದೋಣಿಯ ಆಕಾರದಲ್ಲಿ ನಿರ್ಮಿಸಿದ್ದಾರೆ. ಈ ದೇವಿಯ ಮೂರ್ತಿಯು

ಸಮುದ್ರದಲ್ಲಿ ಮೀನುಗಾರರ ಬಲೆಗೆ ಸಿಕ್ಕಿತಂತೆ. ಮೊದಲು ಬೆಲೆಕೇರಿಯಲ್ಲಿ ಸ್ಥಾಪಿಸಲ್ಪಟ್ಟು ನಂತರ ಅವರ್ಸೆಯಲ್ಲಿ ಪ್ರತಿಷ್ಠಾಪಿಸಲ್ಪಟ್ಟಿತು. ಸಮುದ್ರದಲ್ಲಿ ಯಾನ ಮಾಡುವ ಮೀನುಗಾರರಿಗೆ ಸಣ್ಣ ದೊಡ್ಡ ಮಚವೆ ಹಡಗುಗಳ ವ್ಯಾಪಾರಿಗಳಿಗೆ ಕಾತ್ಯಾಯಿನಿದೇವಿ ರಕ್ಷಿಸುವ ದೇವತೆಯಾಗಿದ್ದಾಳೆ. ಬಾಳೆಹಣ್ಣಿನ ಹೂವಿನ ಬಟ್ಟಲನ್ನು ದೇವಿಗೆ ಅರ್ಪಿಸುವದು ಇಲ್ಲಿಯ ರೂಢಿ. ರಾಣಿಬಾಗ ಎಂಬ ಸ್ಥಳವಿದ್ದರಿಂದ ಪೂರ್ವದಲ್ಲಿ ಇದು ರಾಜರಾಳಿದ ಸ್ಥಳವಿರಬೇಕು. ಸಮೀಪದಲ್ಲಿ 'ಕೆಳಗಿನ ಬೇಣ' ಮತ್ತು 'ಮೇಲಿನ ಬೇಣ' ಎಂಬ ಪರ್ವತ ನೆಲೆಗಳಿದ್ದು ಉತ್ತಮ ಗಿರಿಧಾಮವಾಗಲು ಸೂಕ್ತ ಸ್ಥಳಗಳಾಗಿವೆ.

**ಹಿರೇಗುತ್ತಿ :** ಕುಮಟೆಯಿಂದ ೨೫ ಕಿ.ಮೀ. ದೂರದಲ್ಲಿ ಹಿರೇಗುತ್ತಿ ಜೈನ ಅವಶೇಷಗಳ ದೇವಾಲಯಗಳ ಬೀಡಾಗಿದೆ. ನಾಡವರು ಎಂದು ಕರೆಸಿಕೊಳ್ಳುವ ಜನಾಂಗ ಉತ್ತರಕನ್ನಡದಲ್ಲಿ ಬಂದು ಮೊದಲು ಹಿರೇಗುತ್ತಿಯಲ್ಲಿ ನೆಲೆಸಿ ಆಮೇಲೆ ಸುತ್ತಲಿನ ಹಳ್ಳಿಗಳಿಗೆ ಪಸರಿಸಿದರು. ಆಸ್ತಿಗಳಾದಿಯಿದ್ದ ಸುತ್ತಲಿನ ಭೂಭಾಗಕ್ಕೆ 'ಗುತ್ತು' ಎನ್ನುತ್ತಾರೆ. ಹಿರೇಗುತ್ತಿಯಲ್ಲಿ ಅನೇಕ ಗುಡಿಗುಂಡಾರಗಳು, ಶಾಸನ, ವೀರಗಲ್ಲುಗಳಿವೆ. ಇದಕ್ಕೆ ಹೊಂದಿಯೇ ಕಿರೆಗುತ್ತಿ ಎಂಬಲ್ಲಿ ಜೈನನ ಗದ್ದೆ ಎಂಬ ಸ್ಥಳವಿದ್ದು ಜೈನ ಅವಶೇಷಗಳಿವೆ. ಹಿಂದೆ ಕಲ್ಲಿನ ತೀರ್ಥಂಕರರ ಪ್ರತಿಮೆಗಳಿದ್ದವು. ಪ್ರಾಚೀನ ಮಹಾಲಿಂಗೇಶ್ವರ, ಲಕ್ಷ್ಮೀನಾರಾಯಣ, ಬೊಮ್ಮಯ್ಯ (ಬ್ರಹ್ಮ) ಈ ತ್ರಿಮೂರ್ತಿ ದೇವಾಲಯಗಳ ಜೊತೆಗೆ ಇನ್ನೂ ಅನೇಕ ಪೀಠಗಳಿದ್ದು ಹೊಸದಾಗಿ ನಿರ್ಮಿತವಾದ ಮಹಾಲಕ್ಷ್ಮಿದೇವಕಿ ಕೃಷ್ಣ ರವಳನಾಥ ದೇವಾಲಯ ಬ್ರಹ್ಮಜಟಗಳ ಗುಡಿಗಳು ಬಸ್ಸಿನ ದಾರಿಯಿಂದಲೇ ಕಾಣಸಿಗುವವು.

**ಇಡಗುಂದಿ :** ಸ್ಕಂದಪುರಾಣದಲ್ಲಿ ಇಡಗುಂದಿ, ಕವಡೆಕೆರೆ ಮತ್ತು ಅನಲಗಾರ ಸೇರಿ ಶ್ರೀ ಕ್ಷೇತ್ರಗಳೆಂದು ಪರಿಗಣಿಸಲ್ಪಡುತ್ತದೆ. ಶ್ರೀ ರಾಮನು ಲಕ್ಷಣ ಸೀತಾರೊಡನೆ ಇಲ್ಲಿಗೆ ಬಂದಿದ್ದನೆಂದೂ ರಾಮಲಿಂಗವನ್ನು ಪ್ರತಿಷ್ಠಾಪಿಸಿದನೆಂದು ಹೇಳಿಕೆಯಿದೆ. ಹತ್ತಿರವಿದ್ದ ದೊಡ್ಡ ಕೆರೆಯಲ್ಲಿ ಚಿನ್ನದ ರಥವಿದೆ ಎಂದು ನಂಬಲಾಗಿದೆ. ಕೋಟೆ ಹಾಗು ಇತರ ಅವಶೇಷಗಳಿವೆ. ಗುಂಡಿಯ (ಕಂದಕದ) ಈಡಿನ ಮೇಲೆ ಇರುವ ಸ್ಥಳವಾದ್ದರಿಂದ ಇಡಗುಂದಿಯೆಂಬ ಹೆಸರು ಬಂದಿದೆ. ಯಲ್ಲಾಪುರದ ಕಾರವಾರ ರಸ್ತೆಯಲ್ಲಿ ಯಲ್ಲಾಪುರದಿಂದ ೧೦ ಕಿ.ಮೀ. ದೂರದಲ್ಲಿದೆ.

## ೫. ಇತಿಹಾಸ ಪ್ರಸಿದ್ಧ ನೆಲೆಗಳು

**ಗೇರುಸೊಪ್ಪೆ :** ಹೊನ್ನಾವರದಿಂದ ಶರಾವತಿ ನದಿಗುಂಟ ೨೪ ಕಿ.ಮೀ. ಸುಖಮಯ ನಾವೆವಿಹಾರ ಮಾಡಿ ಇಲ್ಲವೆ ಬಸ್ಸಿನಲ್ಲಿ ೨೪ ಕಿ.ಮೀ. ಪ್ರಯಾಣಿಸಿ ಈ ನೆಲೆಯನ್ನು ಸೇರಬಹುದು. ಹಿಂದೆ ಪರದೇಶಗಳಲ್ಲು ಪ್ರಸಿದ್ಧಿ ಪಡೆದ "ಕರಿಮೆಣಸಿನ ರಾಣಿ" (Pepper Queen of India) ಚೆನ್ನ ಬೈರಾದೇವಿ ರಾಜ್ಯವಾಳಿದ ಈ ರಾಜಧಾನಿ ಇಂದು ದಟ್ಟ ಕಾಡಿನ ನಡುವೆ ಹೇಳ ಹೆಸರಿಲ್ಲದೆ ಹಾಳು ಸುರಿಯುತ್ತಲಿದೆ. ಈ ರಾಜ್ಯಕ್ಕೆ ನಗಿರೆ ರಾಜ್ಯವೆಂತಲೂ ಹೆಸರಿತ್ತು. ಅನೇಕ ಕಟ್ಟಡಗಳು, ಕಟ್ಟಡಗಳ ನೆಲಗಟ್ಟುಗಳು, ದೇವಾಲಯಗಳ ಅವಶೇಷಗಳು, ಜೈನ ಬಸದಿಗಳು, ಶಾಸನಗಳು ದಟ್ಟಡವಿ ಮಧ್ಯದಲ್ಲಿ ಪಾಳು ಬಿದ್ದಿವೆ. ಇಲ್ಲಿಯ ಚತುರ್ಮುಖ ಬಸದಿ ಪ್ರೇಕ್ಷಣೀಯ. ನಾಲ್ಕು ನಿಟ್ಟಿನಿಂದ ಒಂದೇ ರೀತಿಯಾಗಿ ಕಾಣುವ ಕಲಾಕುಸುರಿನ ಜಾಣ್ಮೆ ಮಿಗಿಲಾದದ್ದು. ವ್ಯಾಪಾರಕ್ಕಾಗಿ ಈ ಸ್ಥಳ ವಿದೇಶದಲ್ಲಿಯೂ ಪ್ರಖ್ಯಾತವಾಗಿದ್ದುದರಿಂದಲೇ ಈ ಊರಿಂದ ಬಹುದೂರವಿದ್ದ ಶರಾವತಿಯ ಜೋಗಿಗೆ "ಗೇರಸೊಪ್ಪಾ ಜಲಪಾತ" ಎಂಬ ಹೆಸರು ರೂಢಿಯಾಯಿತು. ನೋಡತಕ್ಕ ನೆಲೆಯಿದು.

**ಹಾಡುವಳ್ಳಿ :** ನಗರಿ ಅರಸರ ದಾಯಾದಿಗಳಾಳುತ್ತಿದ್ದ ಹಾಡುಹಳ್ಳಿ (ಸಂಗೀತಪುರ) ಭಟಕಳದಿಂದ ೨೧ ಕಿ.ಮೀ. ದೂರದಲ್ಲಿದೆ. ಹಾಡುಹಳ್ಳಿಯ ಶಿಲ್ಪಕಲಾ ವೈಭವವು ಉನ್ನತ ಮಟ್ಟದ್ದಾಗಿದೆ. ಗತ ವೈಭವದ ಕುರುಹುಗಳಾಗಿ ೨೪ ಜೈನ ತೀರ್ಥಂಕರರಿರುವ ಬಸದಿಯಿದೆ. ಸಂಗಮವರಿ ಕಲ್ಲುಗಳಿಂದ ರಚಿಸಲ್ಪಟ್ಟಿರುವ ಸುಂದರ ಮೂರ್ತಿಗಳಡಿಗೆ ಬರಹಗಳಿವೆ. ಪ್ರಖ್ಯಾತ ಗುರು ವೈಯಾಕರಣಿ ಭಟ್ಟಾಕಳಂಕ ಇಲ್ಲಿ ನೆಲೆಸಿದ್ದನಂತೆ. ಚಂದ್ರಗಿರಿ-ಇಂದ್ರಗಿರಿಗಳಲ್ಲಿ ಸಂಗೀತೋತ್ಸವ ನಡೆಯುತ್ತಿತ್ತಂತೆ. ಚಂದ್ರನಾಥ ಬಸದಿ, ಪದ್ಮಾವತಿ ದೇವಿಯ ಗುಡಿ, ಬಸದಿಯ ತೀರ್ಥಂಕರರು ಇಂದು ಮೌನವಾಗಿ ಧ್ಯಾನಾಸಕ್ತರಾದಂತಿದೆ. ಹಾಡಹಳ್ಳಿಯ ವೈಭವ ಕಾಡುಗೂಡಿ ಹೋಗಿದೆ. ಅಲ್ಲಲ್ಲಿ ಸುಂದರ

ಮೂರ್ತಿಗಳು, ಕೆತ್ತನೆಗಳು ಚಳಿ-ಮಳೆ-ಬಿಸಿಲುಗಳನ್ನು ಲೆಕ್ಕಿಸದೆ ನಿಂತಿವೆ. ಇಲ್ಲಿ ಜೈನಕೇರಿ ಎಂದು ತೋರಿಸುವ ಎಡಯಲ್ಲಿ ಸುಮಾರು ೯೦೦ ಬಾವಿಗಳು ಹಾಳು ಬಿದ್ದಿವೆ! ಈ ಊರಿನಲ್ಲಿ ಉತ್ಖನನ ನಡೆಸಿದರೆ ಇಲ್ಲಿಯ ಐತಿಹಾಸಿಕ ಶ್ರೀಮಂತಿಕೆಯ ಮೇಲೆ ಹೆಚ್ಚಿನ ಬೆಳಕು ಬೀಳಲನುಕೂಲವಾಗುವದು.

**ಮಿರ್ಜಾನ :** ಕುಮಟೆಯಿಂದ ೧೦ ಕಿ.ಮೀ. ಅಂತರದಲ್ಲಿ ಅಘನಾಶಿನಿ ನದಿಯ ತೆಕ್ಕಯಲ್ಲಿ ಇತಿಹಾಸ ಪ್ರಸಿದ್ಧ ಮಿರ್ಜಾನ ಇದೆ. ಕಾಲಕಾಲಕ್ಕೆ ಈ ಊರು ಬೇರೆಬೇರೆ ತೆರನಾಗಿ ಕರೆಯಲ್ಪಟ್ಟಿದೆ. ಮಿಡಿಜಯ್ ಮಿಡಜಿ ಎಂಬುದು ಇದರ ಮೊದಲಿನ ಹೆಸರು. ವಿದೇಶಿಯರು ಮಿರಜಿ ಎಂದರು. ಬಿಜಾಪುರ ಆದಿಲಶಹನಿಂದ ಕಟ್ಟಲ್ಪಟ್ಟ ಕೋಟೆಗೆ ನಾಲ್ಕು ಪ್ರವೇಶ ಮಾರ್ಗಗಳಿದ್ದು ಅಗಲವಾದ ಮೆಟ್ಟಲುಗಳಿವೆ. ೯ ಬಾವಿಗಳು, ಸುರಂಗ ಮಾರ್ಗವಿದ್ದು ೧೦ ಎಕರೆ ವಿಸ್ತಾರವಾಗಿದೆ. ಪ್ರಮುಖ ನೌಕಾ ವ್ಯಾಪಾರ ಕೇಂದ್ರವಾಗಿತ್ತು. ಮಲ್ಲಿಕೇಶ್ವರ, ಲಕ್ಷ್ಮಿನಾರಾಯಣ ದೇವಾಲಯಗಳಿವೆ. ಪಾರ್ಶ್ವನಾಥನ ಮುರಿದ ವಿಗ್ರಹ ಹಾಗು ಊರ ಹೊರಗೆ ಆರು ವೀರಗಲ್ಲುಗಳಿವೆ. ಪೂರ್ವದಲ್ಲಿ ಡೆಕ್ಕನದಿಂದ ವ್ಯಾಪಾರಿಗಳು ಕುದುರೆ-ಕತ್ತೆ-ಎತ್ತುಗಳ ಮೇಲೆ ಸರಕು ಹೇರಿಕೊಂಡು ಇಲ್ಲಿಗೆ ಬರುತ್ತಿದ್ದರು. ಅವುಗಳ ಮೈತೊಳೆಸುವ ನೀರು ಕುಡಿಸುವ ಹಳ್ಳಗಳಿಗೆ ಇಂದಿಗು ‘‘ಕುದುರೆಹಳ್ಳ’’ ‘‘ಕತ್ತೆಹಳ್ಳ’’ ಎಂದು ಕರೆಯುತ್ತಾರೆ. ಅಂಕೋಲೆ ನಾಡನ್ನಾಳಿದ ಸರ್ಪಮಲ್ಲಿಕನೆಂಬವನು ಈ ಕೋಟೆಯನ್ನು ಗೆದ್ದು ಆಳ್ವಿಕೆ ನಡೆಸಿದ್ದರಿಂದ ಈ ಕೋಟೆಗೆ ಸರ್ಪಮಲ್ಲಿಕನ ಕೋಟೆ ಎಂದೂ ಹೆಸರಿದೆ.

**ಸದಾಶಿವಗಡ :** ಕಾರವಾರದ ಕಾಳಿನದಿಯ ಇನ್ನೊಂದು ತೀರದಲ್ಲಿ ಸದಾಶಿವಗಡವಿದೆ. ೧೬೯೮ರಲ್ಲಿ ಸೋದೆಯ ಒಂದನೇ ಸದಾಶಿವ ನಾಯಕನು ಕಟ್ಟಿಸಿರುವ ಕೋಟೆ (ಸದಾಶಿವಗಡ) ಎತ್ತರ ಗುಡ್ಡದಲ್ಲಿದ್ದು ಅಲ್ಲಿಂದ ಕಾಣುವ ನದಿ-ಸಮುದ್ರದ ನೋಟ ವರ್ಣನಾತೀತ. ಕೋಟೆಯ ಪಕ್ಕದಿಂದಲೇ ಈಗ ಕಾಳಿ ಸೇತುವೆಯ ರಸ್ತೆ ಹೋಗಿದೆ. ಕೋಟೆಯಲ್ಲಿ ಕೊತ್ತಳ, ಕಿಂಡಿ ತೋಪುಗಳನ್ನು ಅವಶೇಷಗಳನ್ನು ಕಾಣಬಹುದು. ಚಿಟ್ಕುಳಿ, ಬಾಳೆಕಿಲ್ಲೆ, ಸಿಂತಾಕೌರಾ ಎಂಬ ಹೆಸರು ಈ ಊರಿನ ಭಾಗಕ್ಕೆ ಇದೆ. ಮಹಾಸತಿ ಚಿತೆಗೆ ಹೋದ ಕುಳಿ ಇದಾಗಿರಬಹುದು. ಊರಲ್ಲಿ ಅನೇಕ ದೇವಾಲಯಗಳಿವೆ. ‘‘ಪೀರ ಕರಿಮುದ್ದಿನ ಮಸೀದೆ’’ ಎಂಬ ದೊಡ್ಡ ಸುಂದರ ಮಸೀದೆ ಇದೆ. ಸದಾಶಿವಗಡ ಕೋಟೆ ಆಯಕಟ್ಟಿನ ಪ್ರದೇಶದಲ್ಲಿದ್ದು ಗೋವೆಯ ಕದಂಬರು, ವಿಜಯನಗರದ ಅರಸರು, ಪೋರ್ತುಗೀಜರು, ಇದನ್ನು ಗೆಲ್ಲುವ ಬಗ್ಗೆ ಕಾತರರಾಗಿದ್ದರು. ಸೋಂದೆ ಅರಸನ ನಂತರ ಮರಾಠರ ಆಧೀನದಲ್ಲಿದ್ದು ಮುಂದೆ ಹೈದರ ಟಿಪ್ಪುಗಳ ವಶಕ್ಕೆ ಬಂದು ಕೊನೆಗೆ ಬ್ರಿಟಿಶರ ವಶವಾಯಿತು. ಕಾಳಿ ನದಿಯು ಸಾಗರ ಸೇರುವಾಗ ಸಂಗಮದೆಡೆ ಏನು ಸೊಗಸು!

**ಬಿಳಗಿ :** ಸಿದ್ದಾಪುರದಿಂದ ೧೩ ಕಿ.ಮೀ. ದೂರದಲ್ಲಿ ಜೈನ ಮನೆತನವು ೧೪೦೦ ರಿಂದ ೧೭೬೩ರ ವರೆಗೆ ವೈಭವದಿಂದ ರಾಜ್ಯವಾಳಿದ ಬಿಳಗಿ ಇದೆ. ಇದನ್ನು ಸಂಸ್ಕೃತೀಕರಣಮಾಡಿ ‘ಶ್ವೇತಪುರ’ ಎಂದು ಕರೆಯುತ್ತಿದ್ದರು. ನಾಲ್ಕು ಬಸದಿಗಳು ಜಿಲ್ಲೆಯಲ್ಲಿಯೆ ಅತಿ ದೊಡ್ಡವೆಂದು ಪರಿಗಣಿಸಲ್ಪಟ್ಟಿದ್ದು, ಹೊಯ್ಸಳ ಮಾದರಿಯ ವಾಸ್ತುಶಿಲ್ಪದಿಂದೊಡಗೂಡಿವೆ. ಶಿಲಾಲೇಖನಗಳು, ಕೋಟೆಯ ಅವಶೇಷಗಳು ಹೇರಳವಾಗಿವೆ. ಗುಡಿಗಳ ಗರ್ಭಗುಡಿ, ಮುಖಮಂಟಪ, ನವರಂಗಗಳು ಆಕರ್ಷಕವಾಗಿದೆ. ದುರ್ಗಾಂಬಿಕಾ ಹಾಗು ರಾಮದೇವಾಲಯಗಳಲ್ಲಿ ಕಾವಿಕಲೆಯ ಉತ್ತಮ ಚಿತ್ರಣವಿದೆ. ಬಿಳಗಿಯು ಸೋಮನದಿಯ ದಂಡೆಗೆ ಇದ್ದು ಇಲ್ಲಿಂದ ೧.೫ ಕಿ.ಮೀ. ದೂರದಲ್ಲಿ ಮೂರುಕುಡಿ ಎಂಬಲ್ಲಿ ೫೫ ಮೀ. ೩೫ ಮೀ ವಿಶಾಲವಾದ ಗುಹೆಯಿದೆ. ಬಿಳಗಿ-ಸಿದ್ದಾಪುರಗಳ ನಡುವೆ ಭುವನಗಿರಿ ಎಂಬ ಗುಡ್ಡವಿದ್ದು ವಿಷ್ಣುವಿಗ್ರಹವನ್ನೊಳಗೊಂಡ ಭುವನೇಶ್ವರಿ ದೇವಾಲಯ ಮತ್ತು ಮೂಕಾಂಬಿಕಾ ಕೆರೆ ಇವು ಚೆನ್ನಾಗಿವೆ.

**ಇಟಗಿ :** ಸಿದ್ದಾಪುರದಿಂದ ೧೯ ಕಿ.ಮೀ. ಮತ್ತು ಬಿಳಗಿಯಿಂದ ೫ ಕಿ.ಮೀ. ದೂರದಲ್ಲಿ ರಾಮೇಶ್ವರ, ವಿಠ್ಠಲ, ಕ್ಷೇತ್ರಪಾಲ ದೇವಾಲಯಗಳಿದ್ದು ಮೇ ತಿಂಗಳಲ್ಲಿ ಜಾತ್ರೆ ನಡೆಯುವದು.

**ಹಳದಿಪುರ :** ಹಿಂದೆ ಹೈದರಾಲಿ, ಮೈಸೂರು ದೊರೆಗಳು, ಬಿದನೂರ ಅರಸರು ಆಳಿದ ‘‘ಹಂದಿಪುರ’’ ಎಂದು ಕರೆಯಲ್ಪಡುತ್ತಿದ್ದ ಹಳದಿಪುರವು ಮುಖ್ಯ ಕೇಂದ್ರವಾಗಿತ್ತು ಎಂದು ಬುಕಾನನ್ ಹೇಳಿದ್ದಾನೆ. ವಿಮಲನಾಥ ತೀರ್ಥಂಕರರ ಬಸದಿ ಇಲ್ಲಿದೆ. ಗಣಪತಿ,

ಗೋಪಾಲಕೃಷ್ಣ ಚಂಡೇಶ್ವರ, ಮುಖ್ಯ ಪ್ರಾಣರ ದೇಗುಲಗಳಿವೆ. ಗೋಪಾಲಕೃಷ್ಣ ಚಾಲುಕ್ಯ ಶೈಲಿಯಲ್ಲಿದ್ದು ಗ್ರಾಮದೇವರೆಂದು ಹೆಸರಾಗಿದೆ. ಕೊಂಕಣಿ ವೈಶ್ಯ ಸಮಾಜದವರು ನಿರ್ಮಿಸಿದ ಶ್ರೀಕೃಷ್ಣಾಶ್ರಮ ಮಠದ ಕಟ್ಟಡ ಪ್ರೇಕ್ಷಣೀಯವಾಗಿದೆ.

## ೬. ತಾಲೂಕು ಕೇಂದ್ರಗಳು

**ಕಾರವಾರ :** ಕರ್ನಾಟಕ ಕಡಲತೀರದ ಕಣ್ಮಣಿ ಕಾರವಾರ. ಜಿಲ್ಲಾ ಕೇಂದ್ರವಾಗಿದೆ. ಅರ್ಧ ಚಂದ್ರಾಕೃತಿಯ ಜಗತ್ತಿನಲ್ಲಿಯೇ ಉತ್ತಮ ಬಂದರುಗಳಲ್ಲಿ ಒಂದೆಂದು ಪರಿಗಣಿಸಲ್ಪಟ್ಟ ನೈಸರ್ಗಿಕ ಬಂದರು ಇದಾಗಿದೆ. ಕಾರವಾರ ಕಡಲದಂಡೆಯಿಂದ ಕೆಲವೆ ಅಂತರದಲ್ಲಿರುವ ದ್ವೀಪಗಳಾದ ದೇವಗಡ, ಕೂರ್ಮಗಡ, ಕಾಂಗಗಡ, ಮಧ್ಯಂಗಡ, ಅಂಜದ್ವೀಪಗಳು ಉತ್ತಮ ವಿಹಾರ ತಾಣಗಳಾಗಿದ್ದು ನೌಕಾವಿಹಾರಕ್ಕೆ ಅನುಕೂಲತೆ ಇದೆ. ಕಾರವಾರ ಸಮುದ್ರ ದಂಡೆ ಸುಂದರ, ಸ್ವಚ್ಛ; ಬ್ಲೂ ಲಗೂನ್ ಹಾಗು ಲೇಡಿಸ್ ಬೀಚಗಳು ಮನೋಹರವಾಗಿವೆ. ಕಡಲದಂಡೆಯಲ್ಲಿ ಸುಂದರವಾದ ತೋಟ, ಮತ್ಸ್ಯೋದ್ಯಾನ, ಹೊಟೇಲುಗಳಿವೆ. ವಿಶ್ವಕವಿ ರವೀಂದ್ರನಾಥರು ಕಾರವಾರ ಕಡಲ ತೀರವನ್ನು ಮನಸಾರೆ ಮೆಚ್ಚಿ. "The sea beach of Karwar is certainly a fit place in which to realise that the beauty of nature is not a mirage of imagination but reflects the Joy of Infinite" ಎಂದಿದ್ದಾರೆ. ಕಪ್ಪನದಿಯು ಕಡಲ ಸೇರುವ ಸಂಗಮಸಿರಿ, ಪೂರ್ವಕ್ಕೆ ಚಾಚಿದ ಹಸಿರು ಪರ್ವತ ಶ್ರೇಣಿ ಮತ್ತು ನೀಲ ಕಡಲ ನಡುವೆ ಚಾಚಿದ ಕಾರವಾರನಗರದ ಸೊಗಸು ಮನವನ್ನು ಸೂರೆಗೊಳ್ಳುವದರಲ್ಲಿ ಸಂದೇಹವಿಲ್ಲ. ಕಾರವಾರದ ಕಾಜುಭಾಗದಲ್ಲಿ ಈಶ್ವರ, ವಿಠ್ಠಲ ರುಕುಮಾಯಿ, ಸಾಯಿಕಟ್ಟೆ, ಮಾಲಾದೇವಿ ಗುಡಿಗಳು, ಬಾಡದಲ್ಲಿ, ರಾಮೇಶ್ವರ ಮಠ, ಬಂಡಿಕಟ್ಟೆ, ಸಪ್ತಕೋಟೇಶ್ವರ, ಗ್ರಾಮದೇವ, ಬ್ರಹ್ಮದೇವ, ರೇವತಿ, ರಾಮಕೃಷ್ಣ ಮಠ, ಪದ್ಮನಾಭಮಠಗಳು, ಕೋಡಿಭಾಗದಲ್ಲಿ ದುರ್ಗಾದೇವಿ, ಮುರಲೀಧರಮಠ, ಪೇಟೆಯಲ್ಲಿ ಮಾರುತಿ, ರಾಧಾಕೃಷ್ಣ ಮುಂತಾದ ದೇವಾಲಯಗಳಿವೆ. ದೋಭಿಘಾಟನಲ್ಲಿ ಇತ್ತೀಚೆಗೆ ನಿರ್ಮಿಸಿದ ಸುಂದರ ಸರಳಶೈಲಿಯ ಶ್ರೀಸತ್ಯಸಾಯಿ ಮಂದಿರವು ಪ್ರಶಾಂತವಾಗಿದೆ. ದೇವಿಭಾಗ ಎಂಬ ಸಮುದ್ರ ಮಧ್ಯದ ನೆಲೆಯಲ್ಲಿ ಪ್ರವಾಸಿಗರಿಗಾಗಿ ವಿಹಾರ-ವಸತಿಧಾಮವನ್ನು ಮನೋಹರವಾಗಿ ನಿರ್ಮಿಸಲಾಗಿದೆ.

**ಅಂಕೋಲೆ :** ಕಡಲ ಸನಿಹದ ಗುಡ್ಡಗಳಲ್ಲಿ ಬೆಳೆಯುವ ಅಂಕೋಲೆ ಮರದಿಂದ ಊರಿಗೆ ಹೆಸರು ಬಂದಿದೆ. ಕಾರವಾರದಿಂದ ೩೪ ಕಿ.ಮೀ. ದೂರದಲ್ಲಿರುವ ತಾಲೂಕಿನ ಕೇಂದ್ರ. ಬಿಜಾಪುರ ಸುಲ್ತಾನರ, ಸೋಂದೆ ರಾಜರ, ಹೈದರ ಮೊದಲಾದವರ ಆಳ್ವಿಕೆಗೆ ಒಳಗಾದ ಈ ಊರಿನ ನಡುವೆ ಕೋಟೆಯಿದ್ದು ಒಳಗೆ ಹನುಮಂತ ದೇವಾಲಯವಿದೆ. ಕದಂಬ, ಚಾಲುಕ್ಯ, ವಿಜಯನಗರ ಅರಸರ ಕಾಲದಲ್ಲಿ ಇದೊಂದು ವ್ಯಾಪಾರಿ ಕೇಂದ್ರವಾಗಿತ್ತು. ಶಿವಾಜಿ ಈ ಊರ ಮೇಲೆ ದಾಳಿ ಮಾಡಿ ಊರನ್ನು ಸುಟ್ಟಿದ್ದನು. ಅಂಕೋಲೆಯ ಸುತ್ತಮುತ್ತ ಜೈನಧರ್ಮ ಚೆನ್ನಾಗಿ ಬೇರೂರಿದ್ದು ಅಲ್ಲಲ್ಲಿ ದೊರೆಯುವ ವೀರಗಲ್ಲು, ಶಿಲಾಶಾಸನಗಳಿಂದ ತಿಳಿದು ಬರುತ್ತದೆ. ಬೆಲೆಕೇರಿ, ಹೊನ್ನೆಬೈಲ, ಬಾವಿಕೇರಿ, ಬಬ್ರುವಾಡೆಗಳಲ್ಲಿ ಅನೇಕ ಜೈನ ಅವಶೇಷಗಳು ಕಾಣಸಿಗುತ್ತವೆ. ಹೊನ್ನಬೈಲಿನಲ್ಲಿ ಗವಿಗಳಿವೆ. ಬಬ್ರುವಾಡೆಯಲ್ಲಿ ನಾಥ ಸಂಪ್ರದಾಯದ ಮತ್ಸೇಂದ್ರನಾಥನ ಬಹುದೊಡ್ಡ ವಿಗ್ರಹವು ೫ ಅಡಿ ಎತ್ತರ ೪ ಅಡಿ ಅಗಲವಿದ್ದು ಈ ಸಂಪ್ರದಾಯದ ವಿಗ್ರಹಗಳಲ್ಲಿ ಭಾರತದಲ್ಲಿಯೇ ದೊಡ್ಡದೇನೊ ಎಂದು ಹೇಳಲ್ಪಡುತ್ತದೆ. ಬಬ್ರುದೇವರೆಂದು ಇದನ್ನು ಈಗ ಕರೆಯುತ್ತಾರೆ. ಇಲ್ಲಿ ಇಸ್ಲಾಂಧರ್ಮವೂ ಸಾಕಷ್ಟು ಶಕ್ತಿಯುತವಾಗಿ ಬೆಳೆಯಿತು. ಎರಡು ಮಹತ್ವದ ಮಸೀದಿಗಳು ಅಂಕೋಲೆಯಲ್ಲಿವೆ. ಮಹಮ್ಮದ ಪೈಗಂಬರರ ಶಿಷ್ಯನಾದ ಅಲಿಯ ಹತ್ತಿರದ ಸಂಬಂಧಿಯಾದ ಸೈಯದ ಫತುಲ್ಲಾ ಬಗದಾದಿಯ ಸ್ಮಾರಕ ಮಸೀದೆಯೂ ಇವುಗಳಲ್ಲಿ ಒಂದು. ಬಗದಾದಿಯು ಇಸ್ಲಾಂಧರ್ಮದ ಪ್ರಸಾರಮಾಡಿ ಇಲ್ಲಿಯೇ ಮರಣಹೊಂದಿದನು. ಭಾರತದಲ್ಲಿಯೇ ಪ್ರಖ್ಯಾತಿಯುಳ್ಳ ಮಸೀದೆ ಇದು. ಅಂಕೋಲೆಯಲ್ಲಿ ಭೂಮಿತಾಯಿ ದೇವರೇ ಪ್ರಮುಖವಾಗಿದ್ದು ವರುಷಕೊಮ್ಮೆ ವಿಜೃಂಭಣೆಯಿಂದ ಬಂಡಿ ಹಬ್ಬವನ್ನು ಆಚರಿಸುವರು. ಇದು ಮಾತೃಪ್ರಧಾನ ಸಂಸ್ಕೃತಿಯವರ ಹಬ್ಬ. ಪಿತೃಪ್ರಧಾನದವರೂ ಬಂದು ಸೇರಿ ಶಾಂತಾದುರ್ಗಾ ಎಂದು ಈ ದೇವಿಯನ್ನು ಕರೆದು ಹಬ್ಬ ಆಚರಿಸಿದರು. ಈ ಗುಡಿಯ ಸುತ್ತಲೂ ಅಡ್ಲೂರ ಯುದ್ಧದಲ್ಲಿ ಮಡಿದ ನಾಡವರ ವೀರಬಂಟರ ಎರಡು ಗುರ್ತುಗಳಿವೆ.

೧೯ನೇ ಶತಮಾನದಲ್ಲಿ ಗೋವೆಯಲ್ಲಿ ಪೂರ್ತುಗೀಜರು ಹಿಂದೂಗಳಿಗೆ ಹಿಂಸೆ ಕೊಡ ತೊಡಗಿದಾಗ ಅಲ್ಲಿಂದ ಸಮುದ್ರ ಮಾರ್ಗವಾಗಿ ಕೊಂಕಣಿಗರು ಶೇಣ್ವಿಗಳು ವೈಶ್ಣವರು ಇಲ್ಲಿ ಬಂದು ಮಠಾಕೇರಿ ಎಂಬಲ್ಲಿ ನೆಲೆಸಿ ಗೋವೆಯಿಂದ ತರಲ್ಪಟ್ಟ ಮಹಾಮಾಯಿ, ಕಂಡೋದರಿ, ಅಂಜದೀವದಿಂದ ತರಲ್ಪಟ್ಟ ಆರ್ಯಾದುರ್ಗಾ ದೇವರುಗಳ ಮಂದಿರ-ಮಠಗಳನ್ನು ಸುಂದರವಾಗಿ ರಚಿಸಿರುವರು. ಇವಲ್ಲದೆ ಸುಂದರ ನಾರಾಯಣ, ವೆಂಕಟರಮಣ, ಹಳೆಪೇಟೆಯ ಗಣಪತಿ, ಅಂಬರಕೊಡ್ಲದಲ್ಲಿ ನಾರಾಯಣ, ಹೊನ್ನೆಕೇರಿಯಲ್ಲಿ ಮಹಾದೇವ, ವಿಠೋಬ, ಕಾಳಭೈರವ, ಕುಂಬಾರಕೇರಿಯಲ್ಲಿ ಕದಂಬೇಶ್ವರ ಮುಂತಾದ ಆಕರ್ಷಕ ದೇವಾಲಯಗಳಿವೆ. ಅಂಕೋಲೆಯ ಕಡಲದಂಡೆಯ ಗುಡ್ಡದ ಮೇಲೆ 'ಬಸವನ ಕಲ್ಲು' ಎಂಬ ರಮಣೀಯ ಪ್ರದೇಶವಿದೆ. ಅಲ್ಲಿ ಬಸವ ಎಂದು ಹೇಳಲ್ಪಡುವ ಕಲ್ಲಿನ ಮೇಲೆ ಅಷ್ಟು ಎತ್ತರ ಪ್ರದೇಶದಲ್ಲಿ ಸದಾ ನೀರು ತೊಟಕುತ್ತ ಇರುವದು ಕುತೂಹಲಕಾರಿಯಾಗಿದೆ.

ಅಂಕೋಲೆ ಗೋಡಂಬಿ ಹಾಗು ಇಸಾಡ ಮಾವಿನಹಣ್ಣುಗಳಿಗೆ ತುಂಬಾ ಪ್ರಸಿದ್ಧವಾಗಿದೆ. ಸ್ವಾತಂತ್ರ್ಯ ಚಳುವಳಿಯ ಕಾಲಕ್ಕೆ ಅಂಕೋಲೆ ತಾಲೂಕಿನಲ್ಲಿ ಸತ್ಯಾಗ್ರ ಚಳುವಳಿ ಪ್ರಭಾವಶಾಲಿಯಾಗಿ ನಡೆದದ್ದು ಇತಿಹಾಸ ಪ್ರಸಿದ್ಧವಾಗಿದೆ. ಅಂಕೋಲೆಯಿಂದ ೫ ಕಿ.ಮೀ. ದೂರದಲ್ಲಿ ಬೆಳೆಂಬರ ಎಂಬಲ್ಲಿ ಅರ್ಧಾಂಗವಾಯುವಿಗೆ ತೀವ್ರಗುಣಕಾರಿಯಾದ ಗಿಡಮೂಲಿಕೆ ಔಷಧವನ್ನು ಹಾಲಕ್ಕಿ ಒಕ್ಕಲಮನೆತನದವರು ಕೊಡುತ್ತಾರೆ. ಅದರಂತೆ ಅಂಕೋಲೆಯಿಂದ ಕಾರವಾರಕ್ಕೆ ಹೋಗುವ ದಾರಿಯಲ್ಲಿ ತೋಡೂರು ಎಂಬಲ್ಲಿ ಎಲುವು ಮುರಿದರೆ ಸರಿಪಡಿಸುವ ಸಿದ್ಧೌಷಧವನ್ನು ಹಾಲಕ್ಕಿ ಒಕ್ಕಲಿಗರೆ ಕೊಡುತ್ತಾರೆ.

**ಕುಮಟೆ :** ಕಾರವಾರ ದಿಂದ ೮೦ ಕಿ.ಮೀ. ಹೊನ್ನಾವರದಿಂದ ೨೦ ಕಿ.ಮೀ. ದೂರದಲ್ಲಿರುವ ಕುಮಟೆ ಸಮುದ್ರ-ನದಿಗಳ ಸಾಮಿಪ್ಯದಿಂದಾಗಿ ಪ್ರಸಿದ್ಧ ಬಂದರವೂ ವ್ಯಾಪಾರಿಕೇಂದ್ರವೂ ಆಗಿತ್ತು. ಹಿಂದೆ 'ಕುಮಟಾ ಕಾಟನ್' ಎಂದು ಜಗತ್ಪ್ರಸಿದ್ಧಿ ಪಡೆದ ಹುಬ್ಬಳ್ಳಿ-ಬಳ್ಳಾರಿ ಮತ್ತು ಮಹಾರಾಷ್ಟ್ರ ಪ್ರದೇಶಗಳಿಂದ ಇಲ್ಲಿಗೆ ಬಂದು ರಫ್ತಾಗುತ್ತಿದ್ದ ಹತ್ತಿಯ ವ್ಯಾಪಾರಿ ಬಲು ಜೋರಾಗಿತ್ತು. ಈಗ ತಾಲೂಕಿನ ಕೇಂದ್ರವಾಗಿದ್ದು ವಾಣಿಜ್ಯ, ಶಿಕ್ಷಣ, ಅಡಿಕೆ ಗೋಡಂಬಿ ವ್ಯಾಪಾರ, ಗಂಧದ ಗುಡಿಗಾರಿಕೆ ಇತ್ಯಾದಿಗಳಿಗೆ ಪ್ರಸಿದ್ಧವಾಗಿದೆ. ಇಲ್ಲಿಯ ದೇವಾಲಯಗಳು ಸುಂದರವೂ, ಕಲಾತ್ಮಕವೂ ವಿಶಾಲವೂ ಆಗಿದ್ದು ಧಾರ್ಮಿಕ ಹಾಗು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಂಡು ಹೋಗುವಲ್ಲಿ ಹೆಸರಾಗಿವೆ. ಕುಮಟೆಗೆ ಹೆಸರು ಬಂದದ್ದು ಇಲ್ಲಿರುವ ಕುಂಭೇಶ್ವರ ದೇವಸ್ಥಾನದಿಂದ. ಈ ಊರನ್ನು ಹಿಂದೆ ಕುಂಭಾಪುರವೆಂದೂ, ಕುಂಭಟಂ ಕುಮ್ಮಿ, ಕುಂಭಟೇಮ್ ಮೊದಲಾದ ಹೆಸರಿನಿಂದ ಕರೆಯಲಾಗಿದೆ. ಗ್ರಾಮದೇವತೆಯಾದ ಭೂಮಿತಾಯಿ (ಶಾಂತಿಕಾಪರಮೇಶ್ವರಿ-ಅಮ್ಮನವರ) ದೇವಸ್ಥಾನದಲ್ಲಿ ವಿಗ್ರಹದ ಹಿಂದುಗಡೆ ಮಹಾಹುತ್ತ ಬೆಳೆದಿದ್ದು ಆಕರ್ಷಕವಾಗಿದೆ. ಜಟ್ಟಗ ದೇವಸ್ಥಾನ, ಜೈನ ಬಸದಿಯ ಪಾರ್ಶ್ವನಾಥ, ಶಾಂತೇರಿ ಕಾಮಾಕ್ಷಿ, ಕಾವೇರಿ ಕಾಮಾಕ್ಷಿ, ಮಾಹಾಳಸಾ, ವೆಂಕಟರಮಣ, ಉಪ್ಪಿನ ಗಣಪತಿ, ಮಹಾಸತಿ ದೇವಾಲಯಗಳು ಆಕರ್ಷಣೀಯವಾಗಿವೆ. ಹೆಚ್ಚಿನ ದೇವಾಲಯಗಳಲ್ಲಿ ಕಲ್ಯಾಣಮಂಟಪ ಹಾಗು ವೇದಿಕೆ, ರಂಗಸ್ಥಳಗಳಿದ್ದು ಸಾಮಾಜಿಕ ಕಾರ್ಯಗಳಿಗೆ ಸಹಾಯಕಾರಿಯಾಗಿವೆ. ಭೂಮಿತಾಯಿ ದೇವಾಲಯದ ಬಂಡಿಹಬ್ಬ ವಿಶೇಷವಾಗಿದ್ದು ಆಗ ಹೂವಿನ ಮಕ್ಕಳು-ಕೋಲಕಾರರು ಬೆಂಕಿಯ ಕುಂಡದಲ್ಲಿ ಹಾಯ್ದು ಹೋಗುವ ದೃಶ್ಯ ಅದ್ಭುತವಾದದ್ದು. ಅದರಂತೆ ಕಾವೇರಿ ಕಾಮಾಕ್ಷಿ ದೇವಸ್ಥಾನದ ಉತ್ಸವದಲ್ಲಿ ಬರಿಗೈಯಿಂದ ಕುದಿಯುವ ಎಣ್ಣೆ ಕಾವಲಿಯಿಂದ ವಡೆಗಳನ್ನು ತೆಗೆಯುವ ಚಮತ್ಕಾರ ನಾಸ್ತಿಕರಲ್ಲೂ ಆಸ್ತಿಕ ಭಾವನೆಯನ್ನು ಪ್ರಚೋದಿಸುವದು. ಮಹಾಲಸಾ ದೇವಾಲಯಗಳಲ್ಲಿಯ ಶ್ರೇಷ್ಠ ದರ್ಜೆಯ ಕಾವಿಕಲೆಯ ಚಿತ್ರಣಗಳು ಹಾಗು ದೇವಾಲಯಗಳಲ್ಲಿಯ ಕಟ್ಟಿಗೆಯ ಛಾವಣಿಗಳಲ್ಲಿನ ಕೆತ್ತನೆಯ ಕಲಾಕುಸುರು ಕಲಾರಸಿಕರಿಗೆ ಪಾಠಶಾಲೆಯಂತಿವೆ. ಕುಮಟೆಯ ಸುತ್ತಲಿನ ಪ್ರದೇಶ ರಮ್ಯವಾಗಿದೆ. ಗಿಬ್ ಹೈಸ್ಕೂಲಿನ ಗುಡ್ಡ ಊರ ನಡುವೆ ಇದ್ದು ಇಲ್ಲಿಂದ ದೂರದವರೆಗಿನ ಸುತ್ತಲಿನ ನೋಟ ಬಲು ರಮ್ಯ. ಬಳಿಯಲ್ಲಿರುವ ಹಳಕಾರ, ಮಣಕಿ ಹಾಗು ಕುಮಟೆ ಹೊಳೆಯ ಸ್ಥಳಗಳು ನೌಕಾವಿಹಾರಕ್ಕೆ ಯೋಗ್ಯವಾಗಿವೆ. ಸಮುದ್ರ, ಬಂದರ ಬಳಿಯ ಬ್ರಹ್ಮದೇವರ ಗುಡ್ಡ ಉತ್ತಮ ವಿಹಾರ ಸ್ಥಳ. ದೇಶವಿದೇಶಿಯರನ್ನು ಆಕರ್ಷಿಸುವ ಸ್ಥಾನ ಗುಡಿಗಾರರಲ್ಲಿ. ಇಲ್ಲಿಯ ಗುಡಿಗಾರರು ತಯಾರಿಸುವ ಗಂಧ, ಹಸ್ತಿದಂತ, ಕಲ್ಲು, ಕಟ್ಟಿಗೆ, ಬೆಂಡುತಳ ಕೆತ್ತನೆಯ ವಸ್ತು ವಿಶೇಷಗಳು, ಮೂರ್ತಿ ಮಂಟಪಗಳು, ಚಿತ್ರಫಲಕ, ರಥ, ಗೃಹಾಲಂಕಾರ ವಸ್ತು, ಹಾರ ಇತ್ಯಾದಿಗಳು ಜಗತ್ಪ್ರಸಿದ್ಧ. ಕತ್ತದ ಬೆತ್ತದ ವಸ್ತುಗಳನ್ನು ನಿರ್ಮಿಸುವ ಕೈಗಾರಿಕಾ ಶಾಲೆಗಳು ಇಲ್ಲಿವೆ. ಗೋಕರ್ಣ, ಕರಾಕಾನಮ್ಮನ ಬೆಟ್ಟ, ಯಾಣ, ಧಾರೇಶ್ವರ, ಬಾಡ ಮೊದಲಾದ

ಪ್ರೇಕ್ಷಣೀಯ ಸ್ಥಳಗಳು ಹತ್ತಿರವಿರುವದರಿಂದ ಈ ಊರಲ್ಲಿ ಪ್ರವಾಸಿ ಕೇಂದ್ರವನ್ನು ಸ್ಥಾಪಿಸಿ ಸರ್ವ ಅನುಕೂಲತೆಗಳನ್ನು ಪ್ರವಾಸಿಗರಿಗೆ ಒದಗಿಸಬೇಕು. ಜಿಲ್ಲೆಯ ಮಧ್ಯವರ್ತಿಸ್ಥಳವಾಗಿದ್ದು ಇಲ್ಲಿಂದ ಜಿಲ್ಲೆಯ ಇನ್ನುಳಿದ ಸ್ಥಳಗಳಿಗೆ ಹೋಗಲು ಸೌಕರ್ಯಗಳಿವೆ.

ಕುಮಟೆಯಿಂದ ೯ ಕಿ.ಮೀ. ದೂರದಲ್ಲಿ ಬಾಡ ಎಂಬಲ್ಲಿ ಅಮ್ಮನವರ ದೇವಾಲಯವು ಸಮುದ್ರ ದಂಡೆಯ ಬಳಿಯಿದ್ದ ಎತ್ತರದ ಗುಡ್ಡದ ಮೇಲಿದ್ದು ಸುತ್ತಲಿನ ಚೆಲುವು ನಯನಾಕರ್ಷಕ. ಹಾಗೆಯೇ ಮುಂದೆ ಸಾಗಿದರೆ ಕಾಗಾಲ ಗುಡ್ಡದ ಮೇಲೆ ಜೀರ್ಣವಾದ ಕೋಟೆ ಕಾಣುತ್ತದೆ. ಇಲ್ಲಿಂದ ಅಘನಾಶಿನಿ ನದಿ ಸಮುದ್ರ ಸೇರುವಾಗ ನಿರ್ಮಾಣವಾದ ಹಿನ್ನೀರಿನ ಹಾಗು ಸಂಗಮದ ನೋಟ ಅವರ್ಣನೀಯವಾಗಿವೆ.

**ಹೊನ್ನಾವರ :** ದಕ್ಷಿಣೋತ್ತರ ಕನ್ನಡ ಜಿಲ್ಲೆಗಳು ಒಂದಾಗಿ ಇದ್ದಾಗ ಹೊನ್ನಾವರವೇ ಆ ಪ್ರದೇಶಗಳ ಜಿಲ್ಲಾ ಕೇಂದ್ರವಾಗಿತ್ತು. ಈಗ ತಾಲೂಕಾ ಕೇಂದ್ರವಾಗಿದೆ. ನವೇರಾ, ಹೊನ್ನಾವರ, ಓನೋರ, ಹಿನೊರ ಹೊನ್ನುರು ಮೊದಲಾದ ಹೆಸರಿದ್ದ ಈ ಊರಿಗೆ ಕ್ರಿ.ಶ. ೮೦೦ ರರ ಸುಮಾರಿಗೆ ಆಳಿದ ರಾಣಿ ಹೊನ್ನಮ್ಮನಿಂದಾಗಿ ಹೆಸರು ಬಂದಿದೆ ಎಂದು ಕೆಲವರು ಹೇಳುತ್ತಾರೆ. ಅರಬ್ಬಿ ತುರ್ಕಿ ದೊರೆಗಳು ಹೊನ್ನಾವರದ ಮೂಲಕವೇ ವಿಜಯನಗರ ರಾಜರೊಡನೆ ಕುದುರೆ ಇತ್ಯಾದಿ ವ್ಯಾಪಾರ ಮಾಡುತ್ತಿದ್ದರು. ಕದಂಬ, ರಾಷ್ಟ್ರಕೂಟ, ಚಾಲುಕ್ಯ, ವಿಜಯನಗರ, ಬಿದನೂರ ರಾಜರುಗಳಾಳಿದ್ದಾರೆ. ೧೫೦೫ರಲ್ಲಿ ವಾಸ್ಕೋಡಿಗಾಮಾನು ಈ ಊರನ್ನು ಸಂಪೂರ್ಣ ಸುಟ್ಟು ಕೊನೆಗೆ ಇಲ್ಲೊಂದು ಕಾರ್ಖಾನೆಯನ್ನು ಸ್ಥಾಪಿಸಿದನು. ೧೫೯೯ ರಲ್ಲಿ ಕ್ರಿಶ್ಚಿಯನ್ ಚರ್ಚು ಪೋರ್ತುಗೀಜರಿಂದ ಕಟ್ಟಲ್ಪಟ್ಟಿತು.'ಸಾನ್ ಸಾಲ್ವಾಡೋರ್' ಚರ್ಚು ಇಲ್ಲಿದ್ದು ಕ್ರಿಶ್ಚಿಯನ್ ಜನವಸತಿ ಹೆಚ್ಚು. ಶರಾವತಿನದಿಯ ಸೇತುವೆ ರಾಜ್ಯದಲ್ಲಿಯೆ ದೊಡ್ಡದು. ಸದಾ ಜನಸಂದಣಿಯಿಂದೊಪ್ಪುವ ಬಂದರ, ಶರಾವತಿ ನದಿಯ ಪರಿಸರ ಸುತ್ತಲಿನ ಗುಡ್ಡ ಬೆಟ್ಟಗಳಿಂದ, ಹುಲುಸಾದ ತೆಂಗು, ಮಾವು, ಹಲಸು ಮೊದಲಾದ ಮರಗಳ ಚಪ್ಪರದಿಂದ ಹೊನ್ನಾವರ ತುಂಬಾ ಚೆಲುವಿನ ಊರಾಗಿದೆ. ಕರ್ನಲ್ ಹಿಲ್, ರಾಮತೀರ್ಥ ಪ್ರದೇಶಗಳು ಆಕರ್ಷಣೀಯ. ಶರಾವತಿನದಿಯ ಉತ್ತರ ದಂಡೆಗೆ ಹೊಂದಿ ಹಿಂದೆ ಪಾಳಯಗಾರರು ವಾಸಿಸಿದ್ದ 'ಕೆಳಗಿನ ಪಾಳ್ಯ' ಎಂಬ ನೆಲೆಯಿದೆ. ದುರ್ಗಾಕೇರಿಯಲ್ಲಿ ದಂಡಿನ ದುರ್ಗಾದೇವಿ ಗುಡಿಯಿದೆ. ಹೊನ್ನಾವರ ಸೈನ್ಯದ ಠಾಣೆಯಾಗಿತ್ತು ಎಂಬುದಕ್ಕೆ ಇವು ಸಾಕ್ಷಿಗಳಾಗಿವೆ. ಲಕ್ಷ್ಮೀನಾರಾಯಣ, ಹನುಮಂತ, ವಿಠೋಬ, ರಾಮೇಶ್ವರ, ವೆಂಕಟರಮಣ, ಗೋಪಾಲಕೃಷ್ಣ, ಮೂಡುಗಣಪತಿ, ಶ್ರೀ ರಾಮಮಂದಿರ ಮೊದಲಾದ ದೇವಾಲಯಗಳಿದ್ದು ಧಾರ್ಮಿಕ ಹಾಗು ಸಾಂಸ್ಕೃತಿಕ ಪರಂಪರೆಯನ್ನು ಕಾಪಾಡಿಕೊಂಡು ಬಂದಿವೆ.

ಇಡಗುಂಜಿ, ಗುಂಡಬಾಳೆ, ಕರಿಕಾನಮ್ಮ, ಬಸವರಾಜದುರ್ಗ, ಗುಣವಂತೆ, ಮಂಕಿ, ಮಾವಿನಕುರ್ವೆ, ತಂಬೊಳ್ಳಿ, ಕುದ್ರಗಿ, ಗೇರುಸೊಪ್ಪೆ, ಅಪ್ಸರಕೊಂಡ ಮೊದಲಾದ ಹಲವು ಪ್ರೇಕ್ಷಣೀಯ ಸ್ಥಳಗಳು ಹತ್ತಿರವಿದೆ.

**ಭಟಕಳ :** ಮಹಾಸಾಧು ಭಟ್ಟಾಕಲಂಕನಿಂದ ಊರಿಗೆ ಈ ಹೆಸರು ಬಂತೆಂದು ಹೇಳುತ್ತಾರೆ. ೧೪೧೪ ಹಾಗು ೧೫೪೫ ರ ಉಲ್ಲೇಖಗಳಲ್ಲಿ ಈ ಊರಿಗೆ 'ವೃತ್ತಪುರ' ಎಂಬ ಹೆಸರಿದೆ. ಇದರಿಂದ ಬಟ್ಟ (ವೃತ್ತ)+ಕಳ (ಸ್ಥಳ) ಎಂಬ ಕನ್ನಡ ಪದಗಳಿಂದ ಊರಿಗೆ ಹೆಸರು ಬಂದಿರಬಹುದೆಂತಲೂ ಊಹಿಸಬಹುದು. ಏಕೆಂದರೆ ಭಟಕಳದ ಪ್ರದೇಶ ವೃತ್ತಾಕಾರದಲ್ಲಿದೆ. ಕಾರವಾರವನ್ನು ಬಿಟ್ಟರೆ ಭಟಕಳವು ಸುಂದರ ರೇವಾಗಿದೆ. ಮೊದಲು ಈ ಊರಿಗೆ ಚೆನ್ನಪಟ್ಟಣವೆಂತಲೂ ಹೆಸರಿತ್ತು. ವಾಸ್ಕೋಡಿಗಾಮನು ಈ ಬಂದರಿಗೆ 'ಸೆಂಟ-ಮೆರಿ' ಎಂದು ಹೆಸರಿಟ್ಟಿದ್ದನು. ೧೩೨೧ ರಲ್ಲಿ ಅರಬರಾಜನು ಭಟ್ಕಳವನ್ನು ಆಳುತ್ತಿದ್ದನು. ಅದರಿಂದ ನವಾಯತ ಸಮಾಜ ನಿರ್ಮಿತವಾಗಿ ಈಗ ಊರಲ್ಲಿ ಅವರ ಸಂಖ್ಯೆಯೇ ಹೆಚ್ಚಿದ್ದು ಸುಂದರವಾದ ವಿಶಾಲವಾದ ಬಂಗ್ಲೆಗಳನ್ನು ಕಟ್ಟಿಸಿಕೊಂಡು ವ್ಯಾಪಾರ ಮಾಡಿಕೊಂಡಿದ್ದಾರೆ. ಎಂಟು ಮಸೀದಿಗಳಲ್ಲಿ ಸುಲ್ತಾನ ಮಸೀದಿ, ಜುಮ್ಮಾ ಮಸೀದಿಗಳು ಮುಖ್ಯವಾಗಿವೆ.

ಗ್ರಾಮದೇವತೆ 'ಮಾರುತಿ'ಯಾಗಿದೆ. ರಾಮನವಮಿಗೆ ಜಾತ್ರೆ ನಡೆಯುವದು. ಅನೇಕ ದೇವಾಲಯಗಳಿವೆ. ಮೂಡಭಟಕಳದ ದೇವಾಲಯದಲ್ಲಿ ರಾಮಾಯಣದ ಕತೆಯನ್ನು ಆದಿಯಿಂದ ಅಂತ್ಯದವರೆಗೆ ಕಲಾತ್ಮಕವಾಗಿ ಚಿತ್ರಿಸಲಾಗಿದೆ.

ಭಟಕಳದ ೧೩ ಬಸ್ತಿಗಳು ಪ್ರೇಕ್ಷಣೀಯವಾಗಿವೆ. ಇವುಗಳ ಕಲಾಕುಸುರಿಗೆ ವಿದೇಶಿ ಯಾತ್ರಿಕರು ಬೆರಗಾಗಿದ್ದಾರೆ. ಚಂದ್ರನಾಥ, ಪಾರ್ಶ್ವನಾಥ, ಅಡಿಕೆ ನಾರಾಯಣ, ನರಸಿಂಹ ಮೊದಲಾದ ಗುಡಿಗಳು ಚಿತ್ತಾಕರ್ಷಕವಾಗಿವೆ. ಕೇತ ಪೈ ನಾರಾಯಣದೇವಾಲಯದಲ್ಲಿ ಪೌರಾಣಿಕ ಹಾಗೂ ಸಾಮಾಜಿಕ ವಾಸ್ತುಶಿಲ್ಪಗಳು ಅತ್ಯಂತ ಪ್ರಶಂಸನೀಯವಾಗಿವೆ. ಅನೇಕ ಶಿಲಾಶಾಸನಗಳಿದ್ದು ನಾರಾಯಣ ನಾಯಕ, ಜಟ್ಟಪ್ಪನಾಯಕ, ಖೇತ ಪೈ ಮೊದಲಾದವರ ಹೆಸರುಗಳನ್ನು ಉಲ್ಲೇಖಿಸಲಾಗಿದೆ. ಭಟಕಳದ ದೀಪಸ್ಥಂಬದ ಬಳಿ ನಿಂತಾಗ ಕಾಣುವ ದೃಶ್ಯ ಸುಂದರ. ಭಟಕಳದಿಂದ ೬.೪ ಕಿ.ಮೀ. ಅಂತರದಲ್ಲಿ ಸಮುದ್ರದಲ್ಲಿ ನೇತ್ರಾಣಿ ಮತ್ತು ಜಾಲಿಕುಂಡ (ಜಾಲಿದ್ವೀಪ)ಗಳೆಂಬ ನಡುಗಡ್ಡೆಗಳಿದ್ದು ಉತ್ತಮ ವಿಹಾರಧಾಮಗಳನ್ನಾಗಿ ಇವುಗಳನ್ನು ಪರಿವರ್ತಿಸಬಹುದು.

**ಶಿರಸಿ :** ಘಟ್ಟದ ಮೇಲಿನ ಎತ್ತರ ನೆತ್ತಿಯ ಮೇಲಿನ ಪ್ರದೇಶವಾಗಿದ್ದರಿಂದಲೇ ಶಿರಸಿ ಎಂದು ಹೆಸರಾಗಿದೆ ಎನ್ನುತ್ತಾರೆ. 'ಶಿರೀಷ' ಎಂಬ ಸಂಸ್ಕೃತ ಪದದಿಂದ ಉತ್ಪತ್ತಿಯನ್ನು ಸೂಚಿಸುತ್ತಾರೆ. ಗೋವೆಯ ಒಂದು ಶಿಲಾಶಾಸನದಲ್ಲಿ 'ಶಚಿಪುರಾಚ ಶಿರಸಿ' ಎಂದಿದೆ. ಬುಕಾನನ್ನು ಇಲ್ಲಿಗೆ ಬಂದಾಗ 'ಸೆರ್ಸಿ' ಒಂದು ಸಣ್ಣ ಹಳ್ಳಿಯಾಗಿದ್ದು ಸೋಂದೆಯ ತಹಶೀಲಿಗೆ ಸೇರಿದ್ದು ಬೇರೆ ಬೇರೆ ಊರಿನ ರಸ್ತೆಗಳು ಕೂಡುವ ಸ್ಥಳವಾಗಿತ್ತು. ಶಾಸನದ ಪ್ರಕಾರ ಶಿರಿಷೆಯಲ್ಲಿ ಯುದ್ಧನಡೆದಿತ್ತು. ಇಲ್ಲಿ ಸೋಂದೆಯ ರಾಮಚಂದ್ರನಾಯಕನು ಕೋಟೆ ಕಟ್ಟಿಸಿ ಸ್ಥಳಕ್ಕೆ ಚೆನ್ನಪಟ್ಟಣವೆಂದು ಕರೆದನು. ಅಡಿಕೆ, ಯಾಲಕ್ಕಿ, ಮೆಣಸುಗಳ ಸಾಂಬಾರ ವಸ್ತುಗಳ ಪ್ರಮುಖ ವ್ಯಾಪಾರಿ ಕೇಂದ್ರವಾಗಿ ಶಿರಸಿ ಭರದಿಂದ ಬೆಳೆಯಿತು. ಇಂದು ವಾಣಿಜ್ಯೋದ್ಯಮ, ಬ್ಯಾಂಕು, ಶೈಕ್ಷಣಿಕ ಸಂಸ್ಥೆ ಇತ್ಯಾದಿಗಳಿಂದಾಗಿ ಮಾರಿಕಾಂಬಾ ಜಾತ್ರೆಯಿಂದಾಗಿ ಕರ್ನಾಟಕದಾದ್ಯಂತ ಪ್ರಸಿದ್ಧಿ ಪಡೆದಿದೆ.

ಮಾರಿಕಾಂಬಾ ದೇವಸ್ಥಾನವು ಶಿರಸಿಗೆ ಕಿರೀಟಪ್ರಾಯವಾಗಿದೆ. ೧೬೯೮ ರಲ್ಲಿ ರಚಿತವಾದ ದೇವಾಲಯವನ್ನು ೧೯ ನೇ ಶತಮಾನದಲ್ಲಿ ಈಗಿದ್ದ ರೀತಿಯಲ್ಲಿ ನಿರ್ಮಿಸಲಾಯಿತು. ಈ ಗುಡಿಯನ್ನು ಆಗಾಗ ನವೀಕರಿಸಲಾಗಿದೆ. ದೇವಾಲಯ, ರಂಗಮಂಟಪಗಳು ವಿಶಾಲವಾಗಿವೆ. ಗೋಡೆಗಳಲ್ಲಿ ಕಾವಿ ಕಲೆಯ ಉತ್ತಮ ಚಿತ್ರಗಳಿದ್ದವು. ಕೆಲವು ನಾಶವಾಗಿವೆ. ಎದುರಿಗೆ ಗೋಡೆಯಲ್ಲಿದ್ದ ಕಾವಿ ಚಿತ್ರಣಕ್ಕೆ ಇನೆಮಲ್ ಬಣ್ಣ ಬಳಿಯಲಾಗಿದೆ. ಮಾರಿಕಾಂಬಾ ಕಟ್ಟಿಗೆಯ ಮೂರ್ತಿಯು ದೇವಿಕೆರೆಯಲ್ಲಿ ದೊರೆತಿತೆಂದು ಪ್ರತೀತಿ. ಎರಡು ವರುಷಕೊಮ್ಮೆ ನಡೆಯುವ ಮಾರಿಕಾಂಬಾ ಜಾತ್ರೆ ಕರ್ನಾಟಕದಲ್ಲೆ ಅತಿ ದೊಡ್ಡ ಜಾತ್ರೆಯಾಗಿದ್ದು ಆಗ ದೇವಿಯ ಪ್ರತಿಮೆಯನ್ನು ನವೀಕರಿಸಲಾಗುವದು. ಹಿಂದೆ ಪ್ರಾಣಿಬಲ ನಡೆಯುತ್ತಿತ್ತು. ಮಹಾತ್ಮಾಗಾಂಧಿಯವರು ಇಲ್ಲಿಗೆ ಬಂದಾಗಿನಿಂದ ಪ್ರಾಣಿ ಬಲಿ ನಿಲ್ಲಿಸಲ್ಪಟ್ಟಿದೆ. ಶಿರಸಿಯಲ್ಲಿ ಅನೇಕ ಮಂದಿರಗಳು, ಮಠ, ಕಲ್ಯಾಣಮಂಟಪಗಳಿದ್ದು ವಿಶಾಲವಾಗಿ ಕಲಾತ್ಮಕವೂ ಆಗಿವೆ. ಗೋಪಾಲಕೃಷ್ಣ, ವೀರಭದ್ರ, ಈಶ್ವರ, ವಿಠೋಬ, ಮಾರುತಿ, ವೆಂಕಟೇಶ್ವರ, ವಿಷ್ಣು, ಗೌರೀಶ್ವರ, ಸೋಮೇಶ್ವರ, ಬಸವಣ್ಣ, ಅಂಬಾಗಿರಿಯ ಅಂಬೆ, ವಿನಾಯಕ ಕಾಲೋನಿಯ ವಿನಾಯಕ ಗುಡಿಗಳೂ ಉಣ್ಣೆ ಮಠ, ಚೌಕಿಮಠ, ಶಾಂತವೀರಸ್ವಾಮಿ ಮಠ, ನಿತ್ಯಾನಂದ ಆಶ್ರಮಗಳೂ ಸುಲ್ತಾ-ಈ-ಹನಿಫಿ ಮತ್ತು ಅಹಲೆ ಅದಿಫಾ ಮಸೀದಿಗಳು, ಸೇಂಟ ಎಂಟೋನಿ ಮತ್ತು ಸೇಂಟಪಾಲ್ ಮಾರ್ಥೋಮಾ ಚರ್ಚುಗಳು ನೋಡತಕ್ಕಂಥವುಗಳು. ಅರಣ್ಯಖಾತೆಯವರು ಚಿಕ್ಕದೊಂದು ಪ್ರಾಣಿಸಂಗ್ರಹಾಲಯವನ್ನಿಟ್ಟಿದ್ದಾರೆ. ಶಿರಸಿಯಲ್ಲಿ ಜಿಲ್ಲಾ ವಿಭಾಗಿ ಕಚೇರಿಗಳು, ಶಾಲಾ ಕಾಲೇಜುಗಳು, ವ್ಯಾಪಾರಿ ಮಳಿಗೆಗಳು ಬಹಳಿದ್ದು ಘಟ್ಟದ ಪ್ರದೇಶಗಳಿಗೆ ಮಧ್ಯವರ್ತಿಯಾದ್ದರಿಂದ ಪ್ರವಾಸೋದ್ಯಮ ಕೇಂದ್ರವನ್ನಾಗಿಸಬಹುದಾಗಿದೆ.

**ಸಿದ್ದಾಪುರ :** ಕಾರವಾರದಿಂದ ೧೦೨ ಕಿ.ಮೀ. ದೂರವಿರುವ ಈ ಪ್ರದೇಶವನ್ನು ಬಿಳಗಿ ದೊರೆಗಳು ಸಮೃದ್ಧಿಗೊಳಿಸಿ ಸಿದ್ಧಿವಿನಾಯಕನ ಗುಡಿಕಟ್ಟಿ ಸಿದ್ದಾಪುರವೆಂದು ಹೆಸರಿಸಿದರು. ಜೋಗಜಲಪಾತಕ್ಕೆ ಹತ್ತಿರವಿರುವ ಈ ಊರು ತಾಲೂಕಾ ಕೇಂದ್ರವಾಗಿದೆ. ಇದು ಮೊದಲು ಕೊಂಡ್ಲಿಹಳ್ಳಿಯ ಭಾಗವೇ ಆಗಿತ್ತು. ಬಿಳಗಿಯ ರಾಣಿ ಜಯಂತಿ ರಾಜಕುಮಾರ ಸಿದ್ದಪ್ಪನ ಆರೋಗ್ಯಕ್ಕಾಗಿ ಪ್ರಾರ್ಥಿಸಿ ಈ ಗುಡಿಗೆ ಉಂಬಳಿ ಕೊಟ್ಟ ಬಗ್ಗೆ ೧೬೫೧ರ ಶಾಸನವಿದೆ. ಗಂಗಾಧರೇಶ್ವರ ದೇವಾಲಯಕ್ಕೂ ದತ್ತಿಕೊಟ್ಟ ಬಗ್ಗೆ ಇನ್ನೊಂದು ಶಾಸನವಿದೆ. ವಿಘ್ನೇಶ್ವರ, ಹನುಮಂತ, ಲಕ್ಷ್ಮೀನಾರಾಯಣ, ಬಸವೇಶ್ವರ ಗುಡಿಗಳಿವೆ. ಕೊಂಡ್ಲಿ ಎಂಬಲ್ಲಿ ಕೋಟೆಯಿದ್ದು ಶಿಥಿಲಗೊಂಡ ಈಶ್ವರಮಂದಿರ,

ಕಲ್ಲಮ್ಮನಗುಡಿ, ವೀರಗಲ್ಲುಗಳೆಲ್ಲ ಇರುವದರಿಂದ ಪುರಾತನ ನೆಲೆಯೆಂದು ಅನಿಸುವದು. ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಸಿದ್ದಾಪುರ ಸೀಮೆಯ ಜನರು ತುಂಬಾ ಕ್ರಿಯಾಶೀಲರಾಗಿ ಹೋರಾಡಿ ಹೆಸರುಗಳಿಸಿದ್ದಾರೆ.

**ಯಲ್ಲಾಪುರ :** ಘಟ್ಟದ ಮೇಲಿನ ತಾಲೂಕಿನ ಸ್ಥಳ. ಕಾರವಾರ-ಹುಬ್ಬಳ್ಳಿ ರಸ್ತೆಯಲ್ಲಿ ಕಾರವಾರದಿಂದ ೯೬ ಕಿ.ಮೀ. ದೂರದಲ್ಲಿದೆ. ೧೩ನೇ ಶತಮಾನದಲ್ಲಿ ಕಾಲಜ್ಞಾನ ವಚನಗಳಲ್ಲಿ 'ಮೇಲುಗೈ-ಯಲ್ಲಾಪುರ' ಎಂದು ಹೇಳಿದೆ. ಚೆನ್ನಬಸವಣ್ಣನು ಇದೇ ಹಾದಿಯಿಂದಲೆ ಉಳವಿಗೆ ಹೋದನಂತೆ. ಯಶಪುರ ಎಂದೂ ಕರೆಯಲ್ಪಟ್ಟಿದೆ. ದಟ್ಟ ಅರಣ್ಯಗಳಿಂದ ಸುತ್ತು ಆವರಿಸಲ್ಪಟ್ಟ ಊರಿದು. ಇಲ್ಲಿಯ ಮಾರಿ ಗುಡಿಯ ಜಾತ್ರೆ ಮೂರು ವರುಷಗಳಿಗೊಮ್ಮೆ ಆಗುವದು. ಈ ಗುಡಿಯಲ್ಲಿ ದೇವಮ್ಮ-ಕಾಳಮ್ಮ ಎಂಬ ಎರಡು ದೇವತೆಗಳಿಗೆ ಪೂಜೆ ಸಲ್ಲುತ್ತಿದ್ದು ಜೋಡುಕೆರೆ ಇರುವಲ್ಲಿ ಮೂರ್ತಿಯೊಂದಿದೆ. ೧ ೧/೨ ಕಿ.ಮೀ. ದೂರ ಹೊಲದಲ್ಲಿ ಕಲ್ಮಠ ಎಂಬಲ್ಲಿ ವಿಜಯನಗರ ಶೈಲಿಯ ಮಂಟಪವಿದ್ದು ಕಂಬಗಳ ಮೇಲಿನ ಬರಹದಿಂದ ಇದೊಂದು ಲಿಂಗಾಯತ ವಿರಕ್ತನ ಗದ್ದುಗೆಯಾಗಿದೆ ಎಂಬುದು ತಿಳಿದು ಬರುವದು. ಇಲ್ಲಿಯ ಶಿಲ್ಪ ಕಲಾತ್ಮಕವಾಗಿದೆ. ವೀರಗಲ್ಲುಗಳು, ಟಿಪ್ಪುಕಾಲದ ಮಸೀದಿ, ಗೌಸಿಯಾ ಮಸೀದಿ, "ಅವರ್ ಲೇಡಿ ಆಫ್ ರೋಜರಿ"ಚರ್ಚು ಇವೆ. ಯಲ್ಲಾಪುರದ ಸುತ್ತ ಮುತ್ತ ಅನೇಕ ಜಲಪಾತಗಳಿವೆ. ಯಲ್ಲಾಪುರವು ಅಕ್ಕಿ, ಅಡಿಕೆ, ತೆಂಗು, ಕಟ್ಟಿಗೆ ವ್ಯಾಪಾರಕ್ಕೆ ಪ್ರಸಿದ್ಧವಾಗಿದೆ.

**ಮುಂಡಗೋಡ :** ಕಾರವಾರದಿಂದ ೧೬೫ ಕಿ.ಮೀ. ದೂರವಿರುವ ತಾಲೂಕಿನ ಸ್ಥಳ. ಹಾನಗಲ್ಲಿನ ಕದಂಬರು ಕೋಟೆ ಕಟ್ಟಿ ಆಳಿದ್ದರು. ನಂತರ ಬಹಮನಿ ಹಾಗೂ ವಿಜಾಪುರದ ಸುಲ್ತಾನರ ಆಧೀನದಲ್ಲಿತ್ತು. ೧೭೬೪ ರಲ್ಲಿ ಪೇಶ್ವೆ ಮಾಧವರಾಯ ಆಕ್ರಮಿಸಿದ್ದ. ಹೈದರಲಿ-ಟಿಪ್ಪು ಈ ಊರನ್ನು ವಿಶಾಲಗೊಳಿಸಿ ಮಸೀದಿ ಕಟ್ಟಿಸಿದರು. ಖಾದರಲಿಂಗ ಎಂಬ ಪೀಠ ಈ ಮಸೀದಿಯ ಎದುರಿಗಿದ್ದು ಹಿಂದೂ ಮುಸಲ್ಮಾನರಿಬ್ಬರೂ ಪೂಜಿಸುತ್ತಾರೆ. ಕೋಟೆಯ ಒಳಗೆ ನರಸಿಂಹ ದೇವಾಲಯವಿದೆ. ಹಳೆ ಮುಂಡಗೋಡು ಎಂಬಲ್ಲಿ ದೇವಾಲಯಗಳಿದ್ದು, ವೀರಗಲ್ಲು, ನಾಗಬಂದಶಿಲ್ಪ, ಕಲ್ಲಿನ ಹಲಗೆಯ ಮೇಲೆ ಶಿಲ್ಪಕೃತಿಗಳು, ವಿಗ್ರಹಗಳು, ಕಾಣಸಿಗುತ್ತವೆ. ಮುಂಡಗೋಡದ ಉತ್ತರಕ್ಕೆ ೭ ಕಿ.ಮೀ. ದೂರ ಇಂದೂರು ಪ್ರಾಚೀನ ಪ್ರಸಿದ್ಧ ನೆಲೆಯಾಗಿದ್ದು ಕಲ್ಮೇಶ್ವರ ದೇವಸ್ಥಾನದ ಕುರುಹು, ಧ್ವಜಸ್ತಂಬ, ಗುಡಿಯ ಗೋಡೆಯ ಚಿತ್ರಗಳು ಗಮನಸೆಳೆಯುತ್ತವೆ. ಇಂದೂರ ಬಳಿ ಟಿಬೇಟಿಯನ್‌ರ ಕಾಲೋನಿಗಳಿವೆ. ಮುಂಡಗೋಡದ ಪರಿಸರದಲ್ಲಿ ಒಟ್ಟು ೯ ಹಳ್ಳಿಗಳಲ್ಲಿ ಎರಡು ಲಾಮಾಕೇಂದ್ರಗಳಲ್ಲಿ ಟಿಬೇಟಿಯನ್ನರಿಗೆ ೧೯೬೭ ರಲ್ಲಿ ವಸತಿ ಏರ್ಪಡಿಸಲಾಯಿತು. ಟಿಬೇಟಿಯನ್‌ರ ವಸತಿ ಪ್ರದೇಶ ನೋಡತಕ್ಕಂಥವುಗಳಾಗಿವೆ. ಅವರ ಜೀವನಕ್ರಮ, ಸಂಸ್ಕೃತಿ, ಕೈಗಾರಿಕಾ ಕೇಂದ್ರಗಳು, ಉಣ್ಣೆಬಟ್ಟೆ, ಕಟ್ಟಿಗೆ ವಸ್ತುಗಳು, ರತ್ನಗಂಬಳಿ ಮೊದಲಾದ ಕರಕುಶಲ ವಸ್ತುಗಳನ್ನು ತಯಾರಿಸುವ ಸಂಘಗಳನ್ನು ಸ್ಥಾಪಿಸಿಕೊಂಡು ಮಾರಾಟ ಮಾಡುವ ಬಗೆ ಎಲ್ಲವೂ ಆಕರ್ಷಕವಾಗಿವೆ. ಈ ಟಿಬೇಟಿಯನ್ನರಿಂದ ಈ ಜಿಲ್ಲೆಯವರಾಗಿಯೇ ಜೀವನ ಸಾಗಿಸುತ್ತಿದ್ದಾರೆ.

**ಹಳಿಯಾಳ :** ಹಳ್ಯಾಳ ಕೋಟೆಯ ಆವರಣದಲ್ಲಿದ್ದ ಗೋವಾಕದಂಬರ ಶಾಸನವೊಂದು ೧೧ಳಳಳರಲ್ಲಿ ಈ ಊರನ್ನು "ಪಲ್ಲಿಯಾಳ" ಎಂದು ನಮೂದಿಸಿದೆ. ಧಾರವಾಡದಿಂದ ೩೫ ಕಿ.ಮೀ. ದೂರದಲ್ಲಿದ್ದು "ದೇವಮ್ಮಾ"ಳ ಧಾರ್ಮಿಕ ಪೂಜೆಗೆ ಪ್ರಸಿದ್ಧವಾಗಿದೆ. ದೇವಮ್ಮಾಳ ಮೂರ್ತಿ ಭವ್ಯವಾಗಿದೆ. ದಸರೆಯ ಕಾಲಕ್ಕೆ ಪಾಂಡವರ ವೇಷಗಳೊಂದಿಗೆ ವಿಜೃಂಭಣೆಯಿಂದ ಉತ್ಸವ ಆಚರಿಸುತ್ತಾರೆ. ಹೈದರ ಶಹಾನದರ್ಗಾ ಇದ್ದು ಉರುಸು ಜರುಗುತ್ತದೆ. ಮಲ್ಲಿಕಾರ್ಜುನ, ರಾಮ, ಮಾರುತಿ, ಬಸವೇಶ್ವರ ವೆಂಕಟರಮಣ ಮೊದಲಾದ ದೇವಾಲಯಗಳಿವೆ. ಮಲ್ಲಿಕಾರ್ಜುನ ದೇವಾಲಯದ ಕಂಬಗಳು ಆಕರ್ಷಕ; ಕಿಡಕಿಯ ಜಾಲರಿಗಳಲ್ಲಿ ಸುಂದರ ಶಿಲ್ಪಗಳಿವೆ. ಹಳಿಯಾಳದಿಂದ ಎರಡು ಕಿ.ಮೀ. ದೂರದಲ್ಲಿ ಹವಗಿ ಎಂಬಲ್ಲಿ ಕಲ್ಮೇಶ್ವರ, ಹವಗಿನಾಥ, ಮಾರುತಿ, ದ್ಯಾಮವ್ವ, ಸುಕಲ್ಲವರ ಗುಡಿಗಳಿವೆ. ಇಲ್ಲಿಯ ವಿಗ್ರಹಗಳು, ಚತುರ್ಮುಖ ಮೂರ್ತಿ, ಷಷ್ಠಮುಖಿಸ್ತಂಭ ಮೊದಲಾದವು ಚಾಲುಕ್ಯ ಶೈಲಿಯಲ್ಲಿವೆ.

**(ಸೂಪಾ) ಜೊಯಿಡಾ :** ಶೂರ್ಪನಖಿಯ ಸ್ಥಳವೆಂದು ಖ್ಯಾತಿವೆತ್ತ ಸೂಪಾ ಪಟ್ಟಣವು ಕಾಳಿ ಆಣೆಕಟ್ಟಿನಿಂದ ನೀರಿನಲ್ಲಿ ಮುಳುಗಡೆಯಾದ ನಂತರ ೧೯೮೧ ರಿಂದ ಜೊಯಡಾ ಪ್ರದೇಶವನ್ನು ತಾಲೂಕಿನ ಸ್ಥಳವನ್ನಾಗಿ ಮಾಡಲಾಗಿದೆ. ಕಾರವಾರ-ಬೆಳಗಾಂವ ರಸ್ತೆಯಲ್ಲಿ ಬೆಳೆಯುತ್ತಿರುವ ಊರು. ಸುತ್ತಲಿನ ನಿಸರ್ಗ ಸುಂದರವಾಗಿದೆ.

ಈ ಎಲ್ಲ ತಾಲೂಕು ಕೇಂದ್ರಗಳಿಂದ ಆ ಆ ತಾಲೂಕು ಕೇಂದ್ರಗಳಲ್ಲಿ ನೋಡಿ ನಲಿಯಬಹುದಾದ ಅನೇಕ ಹಳ್ಳಿಗಳು ಗುಡಿಗೋಪುರಗಳಿಂದ ಪ್ರಕೃತಿರಮ್ಯ ನೆಲೆಗಳಿಂದ ಸಮೃದ್ಧವಾಗಿವೆ.

## ೭. ವನಸಿರಿಯ ಮಡಿಲಲ್ಲಿ ವಾಣಿಜ್ಯಶ್ರೀ

ಉತ್ತರ ಕನ್ನಡದ ನಿಸರ್ಗದ ಮಡಿಲಲ್ಲಿ ಅಲ್ಲಲ್ಲಿ ಕಾರ್ಖಾನೆಗಳಿಂದಾಗಿ ವಿದ್ಯುತ್ ಸ್ಥಾವರಗಳಿಂದಾಗಿ ಹೊಸದಾಗಿ ಅನೇಕ ಊರುಗಳು ೧೯೫೦ ರಿಂದೀಚೆಗೆ ಬೆಳೆದು ಬಂದು ಪಟ್ಟಣಗಳಾಗಿ ಪರಿವರ್ತನಗೊಳ್ಳುತ್ತಲಿವೆ. ಅವುಗಳಲ್ಲಿ ಹಿರಿದಾದ ನಾಲ್ಕಾರನ್ನು ಇಲ್ಲಿ ನಿವೇದಿಸಲಾಗಿದೆ.

**ದಾಂಡೇಲಿ :** ಕಾಗದ, ಪ್ಲೈವುಡ್, ಫೆರೋಮೆಂಗೆನಿಜ ಕಾರಖಾನೆಗಳಿದ್ದು ಉ. ಕನ್ನಡದ ವಾಣಿಜ್ಯೋದ್ಯಮದ ಕ್ಷೇತ್ರವಾಗಿ ಮಹಾನಗರವಾಗಿ ಬೆಳೆದಿದೆ. ಈ ಕಾರಖಾನೆಗಳ ಸಂದರ್ಶನ ಮಹತ್ವಪೂರ್ಣ. ಈ ಪ್ರದೇಶದ ಅರಣ್ಯದಲ್ಲಿಯ ಬಿದುರಿಗೆ ಭೀಮನ ಬಿದಿರು ಎಂದು ಹೆಸರಿದ್ದು ಶ್ರೇಷ್ಠಮಟ್ಟದ್ದಾಗಿದೆ. ಹಿಂದೆ ಈ ಊರನ್ನು ಬಿದಿರುಹಳ್ಳಿ, ದಂಡೊಳ್ಳಿ ಎನ್ನುತ್ತಿದ್ದರು. ದಂಡಕಾರಣ್ಯ ಇದೆಂದು ನಂಬಲಾಗಿದೆ. ಹತ್ತಿರವೇ ಶೂರ್ಪನಖಿಯ ಸ್ಥಳ ಸೂಪಾ ಇದ್ದುದರಿಂದ ಶ್ರೀರಾಮ ಇಲ್ಲಿ ವಾಸಿಸಿದ್ದನೆಂಬುದಕ್ಕೆ ಪುಷ್ಟಿ ಸಿಗುತ್ತದೆ.

ದಾಂಡೇಲಿಯ ಅರಣ್ಯ ಸಂಗ್ರಹಾಲಯವು (Forest Depot) ಭಾರತದಲ್ಲಿಯೇ ದೊಡ್ಡದಂತೆ. ದಾಂಡೇಲಿಯ ವನ್ಯಮೃಗ ರಕ್ಷಣಾ ಕೇಂದ್ರವೂ ಪ್ರಸಿದ್ಧ. ದಾಂಡೇಲಿಯ ಹತ್ತಿರದಲ್ಲಿಯೇ ಸಿಂತೇರಿ ಬಂಡೆಗಳು, ಸೈಕ್ಸಪೊಯಿಂಟ, ವಿಂಚೊಳ್ಳಿದಭದಭೆ, ಕಾವಳಾಗುಹೆಗಳು, ಕನ್ಹೇರಿ ಸೇತುವೆ, ಕಾಳಿನದಿಯ ಯೋಜನೆ ಮೊದಲಾದ ಪ್ರೇಕ್ಷಣೀಯ ನೆಲೆಗಳಿವೆ.

**ಸೈಕ್ಸ ಪಾಯಿಂಟ :** ಬ್ರಿಟೀಶ್ ಅಧಿಕಾರಿ ಸೈಕ್ಸನ ಹೆಸರನ್ನಿಟ್ಟ ಈ ಸ್ಥಳದಿಂದ ಕಾಳಿನದಿಯ ಕೊಳ್ಳದ ದೃಶ್ಯವನ್ನು ಸವಿಯಬಹುದು. ಹಸಿರು ವನಶ್ರೀ ಮಧ್ಯದಲ್ಲಿ ಹರಿಯುತ್ತಿರುವ ನದಿಯ ದೃಶ್ಯವರ್ಣನಾತೀತ. ಕೆಳಗಡೆಗೆ ವಿದ್ಯುದಾಗರವಿದೆ. ಕಣಿವೆಯ ಇನ್ನೊಂದು ಪಕ್ಕದಲ್ಲಿದ್ದ ಕವಳೆ ಗುಹೆಯ ಪ್ರವೇಶದ್ವಾರ ಕಾಣುತ್ತದೆ.

**ಕವಳೆಗುಹೆಗಳು :** ನಾಗಜರಿ ವಿದ್ಯುತ್ ಕೇಂದ್ರದ ವಿರುದ್ಧ ದಿಕ್ಕಿನಲ್ಲಿ ದಟ್ಟಾರಣ್ಯದಲ್ಲಿ ಕಡಿದಾದ ಬಂಡೆಗಳ ಮಧ್ಯೆ ೪ ಮೀಟರ ದ್ವಾರವಿರುವ ಒಳಗೆ ೯ ಮೀಟರನಷ್ಟು ಉದ್ದಗಲದ ಗವಿಯಲ್ಲಿ ನಡುವೆ ಒಂದು ಮೀಟರಿಗು ಎತ್ತರವುಳ್ಳ ಶಿವಲಿಂಗವಿದ್ದು ಮೇಲ್ಭಾವಣಿಯಿಂದ ಖನಿಜಾಂಶಗಳು ಒಸರುವದರಿಂದ ಬಿಳಲಿನಾಕಾರಗಳು ರಚನೆಯಾಗಿ ರಮ್ಯವಾಗಿವೆ. ಸ್ವಲ್ಪೆ ಅಂತರದಲ್ಲಿ ಇನ್ನೊಂದು ಗುಹೆಯಿದೆ.

**ಸಿಂಥೇರಿ ಕಲ್ಲು ಬಂಡೆಗಳು :** ದಟ್ಟಡವಿಯಲ್ಲಿ ಕಾನೇರಿನದಿಯ ಕೊಳ್ಳದಲ್ಲಿ ಆಯತಾಕಾರದ ಬಂಡೆಗಳು ೬೦ ಮೀಟರದಷ್ಟು ಎತ್ತರವಾಗಿದ್ದು ನೂರಾರು ಜೇನು ಹುಟ್ಟುಗಳಿಗೆ ನೆಲೆಯಾಗಿವೆ. ನದಿಯ ತಿರುವಿಕೆಯ ಕೊಳ್ಳ ರಮ್ಯ. ಅತ್ಯಂತ ಸುಂದರ ವಿಹಾರಸ್ಥಾನ.

**ಅಂಬಿಕಾನಗರ :** ದಾಂಡೇಲಿಯಿಂದ ಕೆಲ ಕಿಲೋಮೀಟರ ಅಂತರದಲ್ಲಿ ಬೆಳೆಯುತ್ತಿರುವ “ಅಮಗಾ” ಎಂಬ ಸಣ್ಣ ಹಳ್ಳಿ ಅಂಬಿಕಾನಗರವಾಗಿ ಬೃಹದಾಕಾರ ತಾಳಿದೆ. ನಾಗಜರಿ ವಿದ್ಯುದಾಗರ, ಬೊಮ್ಮನಹಳ್ಳಿ ಆಣೆಕಟ್ಟಿನ ಸಿಬ್ಬಂದಿಗಳಿಗೆ ವಸತಿ ಏರ್ಪಡಿಸಲಾಗಿದೆ. ಸುಂದರವಾದ ಪ್ರವಾಸಿ ಮಂದಿರಗಳು, ರಂಗಮಂದಿರ, ದೇವಾಲಯ ಮೊದಲಾದವುಗಳಿಂದ ಸುತ್ತಲಿನ ನಿಸರ್ಗದಿಂದ ಸುಂದರ ಪಟ್ಟಣವಾಗಿದೆ.

**ರಾಮನಗರ :** ಕರ್ನಾಟಕ ಪಾವರ ಕಾರ್ಪೊರೇಶನ್ ಕೆಲಸಗಾರರ ವಸತಿ ನಿರ್ಮಿಸಿ ಸುಪಾ ಮುಳುಗಡೆಯಾದಾಗ ಜನರ ಪುನರ್ವಸತಿಗಾಗಿ ಬೆಳಗಾಂವ ಜಿಲ್ಲೆಯಿಂದ ೩೬ ಚದುರ ಕಿ.ಮೀ. ಸ್ಥಳವನ್ನು ಉತ್ತರ ಕನ್ನಡಕ್ಕೆ ವರ್ಗಾಯಿಸಲ್ಪಟ್ಟಾಗ ಬೆಳೆದ ಊರು ಇದು. ರಾಮಲಿಂಗ

ದೇವಾಲಯದಲ್ಲಿ ಸುಪಾದಿಂದ ತರಲ್ಪಟ್ಟ ಗುಡಿಯ ಅವಶೇಷಗಳನ್ನು ಕಾಣಬಹುದು. ಗಣಪತಿ, ಶಿವಲಿಂಗ, ವಿಠೋಬ, ಆಂಜನೇಯ ಮೂರ್ತಿಗಳೆಲ್ಲವನ್ನು ಸೂಪಾದಿಂದ ತಂದು ಇಲ್ಲಿ ಪ್ರತಿಷ್ಠಾಪಿಸಲಾಗಿದೆ. ಸೂಪಾದ ಪುನರ್ ನಿರ್ಮಾಣವೇ ರಾಮನಗರ ಎನ್ನಬಹುದು.

**ಕೈಗಾ :** ಯಲ್ಲಾಪುರ ತಾಲೂಕಿನ ಕೈಗಾ ಕಾರವಾರದಿಂದ ೩೪ ಕಿ.ಮೀ. ದೂರದಲ್ಲಿ ದಟ್ಟಡವಿ ನಡುವೆ ಅಣುವಿದ್ಯುತ್ ಕೇಂದ್ರದ ಸ್ಥಾಪನೆಯಿಂದಾಗಿ ಮಹಾನಗರವಾಗಿ ಬೆಳೆಯುತ್ತಿದೆ. ಕಾಳಿನದಿಯ ದಕ್ಷಿಣದಂಡೆಯಲ್ಲಿದ್ದು ನೀರಿನ ಸಮೃದ್ಧಿಯಿದ್ದು ಅಣುಶಕ್ತಿ ಉತ್ಪಾದನೆಗೆ ಬೇಕಾಗುವ ಖನಿಜ ಯುರೇನಿಯಂ ಅರಬೈಲ ಮತ್ತು ಮಂಜಗುಣಿ ಘಟ್ಟಗಳಲ್ಲಿ ದೊರೆಯುವದರಿಂದ ಇಲ್ಲಿ ಅಣುಸ್ಥಾವರವನ್ನು ರೂಪಿಸಲಾಗಿದೆ. ಕೈಗಾ ಯೋಜನೆಯಿಂದಾಗಿ ಮನೆಗಳು, ಅಂಗಡಿ, ಶಾಲೆ, ಇತ್ಯಾದಿ ಪಟ್ಟಣದ ಸಕಲ ಸೌಲಭ್ಯವೂ ಇಲ್ಲಿ ಆಗಿದೆ. ಹತ್ತಿರವೇ ಇದ್ದ ಮಲ್ಲಾಪುರ ಎಂಬಲ್ಲಿ ಪಂಚತಾರಾ ಹೊಟೇಲು ಇದ್ದು ಪ್ರವಾಸಿಗಳಿಗೆ ಸಕಲ ಸೌಲಭ್ಯವನ್ನು ಒದಗಿಸಲಾಗುವದು.

**ಬಿಣಗೆ :** ಕಾರವಾರದಿಂದ ೬ ಕಿ.ಮೀ. ದೂರದಲ್ಲಿ ಕಾಸ್ಟಿಕ್ ಸೋಡಾ ಕಾರ್ಖಾನೆ ಸ್ಥಾಪಸಿಲ್ಪಟ್ಟು ಈಗ ಮಹತ್ವ ಪಡೆದಿದೆ. ಸೋಮನಾಥ, ಮ್ಹಾಳಸಾ, ಭೂದೇವಿ ಹಾಗೂ ಗುಡ್ಡದ ಮೇಲೆ ಹೆದ್ದೇವರುಗಳು ದೇವಾಲಯಗಳಿವೆ. ಅಂಜದೀವ ನಡುಗಡ್ಡೆ ಕೇವಲ ನಾಲ್ಕು ಕಿ.ಮೀ. ದೂರದಲ್ಲಿದೆ.

**ಪ್ರಾಣಿಪಕ್ಷಿಧಾಮಗಳು :** ಸಹ್ಯಾದ್ರಿ ಶೃಂಗಮಾಲೆಯು ಜಿಲ್ಲೆಯ ೮೦% ಭಾಗ ಆವರಿಸಿರುವದರಿಂದ ಪಕ್ಷಿ ಪ್ರಾಣಿ ಸಂಕುಲಗಳಿಗೆ ಎಣೆಯಿಲ್ಲ. ಸಾರಂಗ, ಚಿಗರೆ, ಕಾಡುಕೋಣ, ಹಂದಿ, ಹುಲಿ, ಚಿರ್ತು, ಆನೆಗಳಾದಿ ಪ್ರಾಣಿಗಳು ನವಿಲು, ಗೊರವಂಕ, ಕಾಜಾಣ, ಗಿಳಿ, ಕೋಗಿಲೆ, ಬೆಳ್ಳಕ್ಕಿ ಕಾಡುಕೋಳಿ ಮೊದಲಾದ ಪಕ್ಷಿಗಳು ನೂರಾರು ಜಾತಿಯ ವೃಕ್ಷಗಳು ಸಂಶೋಧಕರ ಹಾಗು ವಿಹಾರಾರ್ಥಿಗಳ ಮನಸೆಳೆಯುವವು. ಗಣೇಶಗುಡಿ, ರಾಮನಗುಳಿ, ದಾಂಡೇಲಿ, ಕುಳಗಿ, ಕರ್ದಾ, ಅಣಶಿ ಮೊದಲಾದ ಎಡೆಗಳಲ್ಲಿರುವ ಅಭಯಾರಣ್ಯಗಳು ವೀಕ್ಷಣೆಗೆ ಯೋಗ್ಯವಾಗಿವೆ. ಅಣಶಿಯಲ್ಲಿ ವೈವಿಧ್ಯಮಯವಾದ ಕಾಡಿನ ಉದ್ಯಾನವಿದ್ದು ೧೯೮೭ರಲ್ಲಿ ಇದನ್ನು ರಾಷ್ಟ್ರೀಯ ಉದ್ಯಾನವೆಂದು ಘೋಷಿಸಲಾಯಿತು. ಇದಕ್ಕೆ ಹೊಂದಿಯೇ ಅಭಯಾರಣ್ಯ ಪ್ರದೇಶವಿದೆ. ಸೂರ್ಯನ ಕಿರಣವು ನೆಲಮುಟ್ಟದಷ್ಟು ದಟ್ಟ ಕಾಡು; ವೈವಿಧ್ಯಮಯ ಸಸ್ಯರಾಶಿ! ೧೯೭ ಕ್ಕೂ ಹೆಚ್ಚು ಪಕ್ಷಿ ಪ್ರಬೇಧಗಳಿರುವ ಪಕ್ಷಿಕಾಶಿ! ಹಲವು ಬಗೆಯ ಕಾಡುಪ್ರಾಣಿಗಳು ಸುರಕ್ಷಿತವಾಗಿ ಓಡಾಡಿಕೊಂದಿರುವ ತಾಣ! ಈ ಕಾಡು ನಿಸರ್ಗವೇ ಸ್ವರ್ಗವಾದಂತೆ ಇದೆ.

ಅತ್ತಿವೇರಿ, ದಾಂಡೇಲಿ ಬಳಿಯಲ್ಲಿ, ಮಾಸೂರಕೂರ್ವೆ ಮೊದಲಾದಲ್ಲಿ ಈಗೀಗ ಅಣೆಕಟ್ಟು ಕಟ್ಟಿ ನೀರು ನಿಲ್ಲಿಸಿದ ಎಡೆಗಳಲ್ಲಿ ಹೊಸಹೊಸ ಪಕ್ಷಿಧಾಮಗಳು ಈ ಜಿಲ್ಲೆಯಲ್ಲಿ ನಿರ್ಮಾಣಗೊಳ್ಳುತ್ತಿದ್ದು ಜಿಲ್ಲೆಗೊಂದು ಶೋಭೆಯ ಸಂಗತಿಯಾಗಿದೆ. ಭಾರತದಲ್ಲಿ ಸುಮಾರು ೧೭೦೦ ಪಕ್ಷಿ ಪ್ರಭೇದಗಳಿದ್ದು ಅವುಗಳಲ್ಲಿ ಸುಮಾರು ೪೨೫ ಪ್ರಭೇದಗಳನ್ನು ಕರ್ನಾಟಕದಲ್ಲಿ ಕಾಣಬಹುದು. ಇವುಗಳಲ್ಲಿ ಹೆಚ್ಚಿನವು ಉತ್ತರಕನ್ನಡದಲ್ಲಿ ಕಾಣಬಹುದು.

**ಲೇಲಾಲಿಲೇಸೋ ಲೇಲಾಲಿಲೋ :** ನೌಕಾವಿಹಾರಕ್ಕೆ, ಜಲಕ್ರೀಡೆಗೆ ಸಾಗರತೀರದ ಆಟಗಳಿಗೆ ಉತ್ತರ ಕನ್ನಡ ಜಿಲ್ಲೆ ಉತ್ಸಾಹದ ಸೀಮೆಯಾಗಿದೆ. ಕಾಳಿ ಗಂಗಾವಳಿ, ಅಘನಾಶಿನಿ, ಶರಾವತಿ, ವೆಂಕಟಾಪುರ, ವರದಾ ಮೊದಲಾದ ಹಿರಿ ಹೊಳೆಗಳ ಜೊತೆಗೆ ಬೇಲೆಕೇರಿ ನದಿ, ಅಂಕೋಲೆ ಹೊಳೆ, ಕುಮಟೆ ಹೊಳೆ, ಬಡಗಣಿ ನದಿ, ಶರಾಬಿ, ಗೊರೆಗದ್ದೆ ಹಳ್ಳ (ಬೆಳಸೆಹತ್ತಿರ) ಮೊದಲಾದ ಹಲವು ಕಿರಿಹೊಳೆಗಳು ಈ ಜಿಲ್ಲೆಯಲ್ಲಿ ಹರಿದಿವೆ. ಹಿರಿಹೊಳೆಗಳು ಸಾಗರ ಸೇರುವ ಹಿನ್ನೆಲೆಯಲ್ಲಿ ವಿಸ್ತಾರವಾಗಿ ಹರಡಿಕೊಂಡಿವೆ. ಈ ನದಿಗಳ ನಡುವೆ ಕೂರ್ವೆಗಳು (ನಡುಗಡ್ಡೆಗಳು) ಆಕರ್ಷಣೀಯವಾಗಿವೆ. ಗಂಗಾವಳಿ ನದಿಯಲ್ಲಿ ಹಿಚ್ಕಡ ಮತ್ತು ಮೋಟನ ಕೂರ್ವೆಗಳು, ಅಘನಾಶಿನಿ ನದಿಯಲ್ಲಿ ಮಾಸೂರ, ಮಲ್ಲ, ಹಳಕಾರ, ಐಗಳ ಕೂರ್ವೆಗಳು, ಶರಾವತಿನದಿಯಲ್ಲಿ ಮಾವಿನ, ಮಾಳ್ಕೋಡ, ಹೈಗುಂದ, ಉಪ್ಪಿನ ಕೂರ್ವೆಗಳೆಲ್ಲ ಸುಂದರ ವಿಹಾರತಾಣಗಳೇ ಎನ್ನಬೇಕು. ಇವಲ್ಲದೆ ಸಮುದ್ರ ದಂಡೆಯಲ್ಲಿ ಅಂಜದೀವ, ದೇವಗಡ, ಮಧ್ಯಂಗಡ ಕೂರ್ವಗಡ, ಕಾಂಗಗಡ, ಬಸವರಾಜದುರ್ಗ, ನೇತ್ರಾಣಿ, ಜಾಲಿದ್ವೀಪಗಳು ನೀಲ ಜಲಧಿಯಲ್ಲಿ ಶೋಭಿಸುವ ಇಂದ್ರಬನಗಳಾಗಿವೆ. ಇಲ್ಲಿ ನೌಕಾ ವಿಹಾರ, ಈಜಾಟ,

ಮತ್ಸ್ಯಬೇಟೆ ಮುಂತಾದವುಗಳಿಂದ. ನಲಿಯಬಹುದು. ಆಣೆಕಟ್ಟನ್ನು ಕಟ್ಟ ನಿರ್ಮಿಸಿದ ಜಲಾಶಯಗಳಲ್ಲಿ ನೌಕಾವಿಹಾರದ ವ್ಯವಸ್ಥೆ ಮಾಡಬಹುದು. ಒಟ್ಟಿನಲ್ಲಿ ಎಲ್ಲ ದೃಷ್ಟಿಯಿಂದಲೂ ಉತ್ತರ ಕನ್ನಡ ಪ್ರವಾಸಿಗಳಿಗೆ ನಂದನವನ.

ಸಾಹಿತ್ಯ ಸಂಸ್ಕೃತಿ ದೃಷ್ಟಿಯಿಂದಲೂ ಉತ್ತರಕನ್ನಡ ವೈಶಿಷ್ಟ್ಯ-ಪೂರ್ಣವಾಗಿದೆ. ಆದಿಕವಿ ಪಂಪ, ಆಂಡಯ್ಯ, ಭಟ್ಟಾಕಳಂಕ, ಬತ್ತಲೇಶ್ವರ, ವರದವಿಠ್ಠಲ, ಅಭಿನಂದ, ಗೇರಸೊಪ್ಪೆಯ ಸಾಂತಪ್ಪಯ್ಯ, ವಿಷ್ಣು ಸಭಾಹಿತ ಮೊದಲಾದವರ ಸಾಹಿತ್ಯ ಪರಂಪರೆಯನ್ನು ಮುನ್ನಡಿಸಿಕೊಂಡು ಕಾವ್ಯ, ಕಾದಂಬರಿ, ನಾಟಕ, ಕತೆ, ವಿಮರ್ಶೆ ಕ್ಷೇತ್ರಗಳಲ್ಲಿ ಹೆಸರುಗಳಿಸಿದ, ಹಿರಿ ಕಿರಿ ಸಾಹಿತಿಗಳಿದ್ದಾರೆ. ಇಲ್ಲಿಯ ಯಕ್ಷಗಾನದ ಆಟದ ಪರಂಪರೆ ಶ್ರೀಮಂತವಾಗಿದೆ. ಜನಪದ ಕಲೆಗಳಾದ ಸುಗ್ಗಿಯ ಕುಣಿತ, ಗುಮಟೆಪಾಂಗು, ಬಿಂಗಿಪದ, ಡಮಾಮಿಕುಣಿತ, ಬೇಡರ ಕುಣಿತ, ಡೊಳ್ಳುಕುಣಿತ, ಇತ್ಯಾದಿ ಇತ್ಯಾದಿ ಹಲವಾರು ಕಲೆಗಳು ಶ್ರೀಮಂತವಾಗಿವೆ. "ಕನ್ನಡ ಸಂಸ್ಕೃತಿಯ ತೊಟ್ಟಿಲು" ಎಂದು ಈ ಜಿಲ್ಲೆಯನ್ನು ಕರೆಯಲಾಗಿದೆ. ಅತಿಥಿ ಅಭ್ಯಾಗತರ ಸತ್ಕಾರದಲ್ಲಿ ಎತ್ತಿದ ಕೈ ಇಲ್ಲಿಯ ಜನ. ಹಲವು ಜಾತಿ, ಹಲವು ಬಗೆಯ ಭಾಷೆ ಉಡಿಗೆ-ತೊಡಿಗೆ, ಅಡಿಕೆ-ಯಾಲಕ್ಕಿ-ತೆಂಗಿನ ತೋಟಗಳು, ಹಲಸು, ಮಾವು, ಗೋಡಂಬೆಗಳ ಬೆಳೆ, ಎಳೆನೀರು ಕಷಾಯಗಳ ಪೇಯ, ಜಾತ್ರೆ-ಬಂಡಿ ಹಬ್ಬ, ಹಗರಣ, ಫೆಸ್ತುಗಳು ಬಂದ ಜನರಿಗೆ ರಂಜನೆ ನೀಡುವಾಗ ಇನ್ನೇನು ಬೇಕು. ಪ್ರವಾಸೋದ್ಯಮದ ಬೆಳವಣಿಗೆಗೆ ಪ್ರಯತ್ನಬೇಕು.

ಈ ಜಿಲ್ಲೆಯಲ್ಲಿ ಕಾರವಾರ, ಕುಮಟೆ, ಶಿರಸಿ, ಯಲ್ಲಾಪುರ, ದಾಂಡೇಲಿಗಳಲ್ಲಿ ಪ್ರವಾಸಿಕೇಂದ್ರಗಳನ್ನು ಸ್ಥಾಪಿಸಬೇಕು. ಕಡಲ ತೀರದ ಬಂದರುಗಳಿಗೆ ಹಡಗು ಸಾರಿಗೆಯ ವ್ಯವಸ್ಥೆಯಾಗಬೇಕು. ಕೊಂಕಣರೇಲ್ವೆ ಪ್ರವಾಸೋದ್ಯಮಕ್ಕೆ ವರದಾನವಾಗಿದೆ. ಪ್ರೇಕ್ಷಣೀಯ ಸ್ಥಳಗಳಿಗೆ ಕೇಂದ್ರ ಪ್ರದೇಶಗಳಿಂದ ಹೋಗಿ ಬರಲು ಉತ್ತಮ ರಸ್ತೆ-ಸಾರಿಗೆ ವ್ಯವಸ್ಥೆ, ಸರ್ವರ ರುಚಿಗೆ ಕಿಸೆಗೆ ಒಗ್ಗುವ ಶುಚಿಯಾದ ಹೊಟೇಲ್ಲುಗಳು, ಸರಿಯಾದ ವಸತಿಗೃಹಗಳು, ಸಂದರ್ಶಿಸುವ ಸ್ಥಳದ ವಿವರಣಾ ಪುಸ್ತಕಗಳು, ಚಿತ್ರಗಳು, ಪ್ರಚಾರ ಪ್ರಕಟಣೆಗಳು, ಸರಿಯಾದ ಮಾರ್ಗದರ್ಶಕರು, ಸಂದರ್ಶಿಸಿದ ಸ್ಥಳದ ನೆನಪಿಗಾಗಿ ಕೊಂಡೊಯ್ಯಲು ಯೋಗ್ಯವಾದ ಪ್ರತಿಕೃತಿಗಳು ಇಲ್ಲವೆ ವಿಶಿಷ್ಟ ವಸ್ತುಗಳು, ಮನರಂಜನಾ ಮಂದಿರಗಳು, ವಂಚಿಸದ ವರ್ತಕರು, ಭಯರಹಿತ ವಾತಾವರಣ ಇವೆಲ್ಲ ಪ್ರವಾಸೋದ್ಯಮ ಬೆಳೆದು ಬರಲು ಬೇಕಾದ ಅನುಕೂಲತೆಗಳು. ಇವೆಲ್ಲ ದೊರೆತಲ್ಲಿ ಉತ್ತರಕನ್ನಡದಲ್ಲಿದ್ದ ನೂರಾರು ಪ್ರೇಕ್ಷಣೀಯ ಸ್ಥಳಗಳಿಗೆ ಚಿನ್ನಕ್ಕೆ ಪುಟವಿಟ್ಟಂತಾಗುವದು. ಜಗತ್ತಿನ ಪ್ರೇಕ್ಷಣೀಯ ಜಿಲ್ಲೆಗಳಲ್ಲಿ ಉತ್ತರ ಕನ್ನಡ ಒಂದೆಂಬುದಕ್ಕೆ ಸಂದೇಹವೇ ಇಲ್ಲ.

* * *